ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 3 | ಸಂಚಿಕೆ 1 | ಜನವರಿ 4, 1981 | ಬೆಲೆ : 50 ಪೈಸೆ

ಹೊಸ ವರ್ಷ

ಸಂಪಾದಕೀಯ

1980ನೇ ವರ್ಷ ಮುಗಿದು 1981ನೇ ವರ್ಷದಲ್ಲಿ ಕಾಲಿಟ್ಟಿದ್ದೇವೆ. ಆಶಾವಾದಿಯಾದ ಮಾನವ, ಉತ್ತಮವನ್ನು ಬಯಸುತ್ತಾ ಶುಭಾಶಯವನ್ನು ಕೋರುವುದು ಸ್ವಾಭಾವಿಕ. ಆದರೆ ನಮ್ಮ ದೇಶದ ಕ್ಲಿಷ್ಟ ಪರಿಸ್ಥಿತಿ 1981ನೇ ಇಸವಿ ಜನತೆಯ ಆಶೋತ್ತರಗಳನ್ನು ಈಡೇರಿಸುವುದರಲ್ಲಿ ಮುನ್ನಡೆಯುವಂತೆ ಕಾಣುವುದಿಲ್ಲ. ಜನತೆಯ ಅವಶ್ಯಕತೆಗಳನ್ನು, ಬೇಡಿಕೆಗಳನ್ನು ಈಡೇರಿಸುವುದಕ್ಕೆ ಬದಲು, ಜನತೆಯ ಬೇಡುವ ಹಕ್ಕುಗಳನ್ನೇ ಕಿತ್ತುಕೊಂಡು, ಪ್ರಜಾಪ್ರಭುತ್ವವನ್ನೇ ಮೊಟಕುಗೊಳಿಸುವ ಕ್ರಮವನ್ನು ರಾಷ್ಟ್ರವನ್ನಾಳುವ ಇಂದಿರಾ ಕಾಂಗ್ರೆಸ್ ಸರಕಾರ ಅನುಸರಿಸುತ್ತಿರುವ ಸಂದರ್ಭದಲ್ಲಿ 1981ನೇ ಇಸವಿ ಪ್ರಾರಂಭವಾಗಿದೆ. 1981ರಲ್ಲಿ ಸರ್ವಾಧಿಕಾರಿ ಕ್ರಮಗಳು ಬಿಗಿಯಾಗುವುದು ಸ್ಪಷ್ಟ.

ಅಸ್ಸಾಮಿನಲ್ಲಿನ ಛಿದ್ರಕಾರಿ ಪ್ರತ್ಯೇಕತಾ ಚಳುವಳಿ ಹಾಗೂ ಇತರೆಡೆಗಳಲ್ಲಿನ ಕೋಮು ಹಾಗೂ ಜಾತೀಯ ಗಲಭೆಗಳೂ 1981ರಲ್ಲಿ ಕಡಿಮೆಯಾಗುವ ಲಕ್ಷಣಗಳಿಲ್ಲ. ತೀವ್ರವಾಗಿ ಬೆಳೆದುಬಂದಿರುವ ಆರ್ಥಿಕ ಬಿಕ್ಕಟ್ಟು ಮತ್ತು ಸಾಮಾಜಿಕ ಸಮಸ್ಯೆಗಳ ಹಿನ್ನೆಲೆಯಲ್ಲಿ ಸಮಸ್ಯೆಗಳು ಇನ್ನೂ ಕಠಿಣಗೊಳ್ಳುವ ಲಕ್ಷಣಗಳೇ ಜಾಸ್ತಿ. ಸ್ವಾತಂತ್ರ್ಯ ದೊರೆತ ಮೇಲೆ ರಾಷ್ಟ್ರವನ್ನಾಳಿದ ಸರಕಾರಗಳು ಅನುಸರಿಸಿಕೊಂಡು ಬಂದ ಬಂಡವಾಳಶಾಹಿ ನೀತಿಯೇ ಎಲ್ಲ ಸಮಸ್ಯೆಗಳಿಗೂ ಕಾರಣ. ಈ ಧೋರಣೆಗಿಂತ ಭಿನ್ನವಾದ ಎಡ ಪ್ರಜಾಪ್ರಭುತ್ವವಾದಿ ಧೋರಣೆಯಿಂದಲೇ ಜನಗಳಿಗೆ ಪರಿಹಾರ ದೊರೆಯುವುದು ಸಾಧ್ಯ. ಈ ದಿಸೆಯಲ್ಲಿ 1981ರಲ್ಲಿ ಗಣನೀಯ ಬೆಳವಣಿಗೆಯಾಗುವುದೆಂದು ಹಾರೈಸುವುದು ಸ್ವಾಭಾವಿಕ ಮತ್ತು ವಾಸ್ತವಿಕವೂ ಹೌದು.

ಕರ್ನಾಟಕ ರಾಜ್ಯದಲ್ಲಿ 1980ರಲ್ಲಿ ಕಾರ್ಮಿಕರ ಹೋರಾಟ, ರೈತ ಚಳುವಳಿ ತೀವ್ರವಾಗಿ ಬೆಳೆದುಬಂದಿದೆ. ಇತರ ವಿಭಾಗಗಳೂ ಹೋರಾಟದ ಪಥದಲ್ಲಿ ಇವೆ. ರಾಜಕೀಯವೇ ಬೇಡವೆಂಬ ಕೂಗು ಅರ್ಥಹೀನವಾಗುತ್ತಲಿದೆ. ಈ ಸಂದರ್ಭದಲ್ಲಿ 1981ರಲ್ಲಿ ಎಡ ಪ್ರಜಾಪ್ರಭುತ್ವ ಶಕ್ತಿಗಳು ಒಂದುಸೇರಿ ರಾಜ್ಯದ ಜನತೆಯ ಹೋರಾಟಕ್ಕೆ ಹೊಸ ತಿರುವು, ನಾಯಕತ್ವ ಕೊಡುವ ಪ್ರಯತ್ನ ನಡೆದಿದೆ. ಜನತೆಯ ಪ್ರಜಾಪ್ರಭುತ್ವವಾದಿ ಹೋರಾಟಗಳನ್ನು ಮುಂದೊಯ್ಯುವುದರಲ್ಲೂ, ಮತ್ತು ರಾಜ್ಯದ ರಾಜಕೀಯಕ್ಕೆ ಹೊಸ ಮತ್ತು ಪ್ರಗತಿಶೀಲ ತಿರುವನ್ನೀಯುವುದರಲ್ಲಿ 1981ನೇ ಇಸವಿ ಚಾರಿತ್ರಿಕವಾಗಲಿ ಎಂದು ಹಾರೈಸುತ್ತಾ ನಮ್ಮ ಓದುಗರೆಲ್ಲರಿಗೂ ಕ್ರಾಂತಿಕಾರಿ ಶುಭಾಶಯಗಳನ್ನು ಕಳುಹಿಸುತ್ತಲಿದ್ದೇವೆ.



24-12-80 ಸಂಜೆ ಮೈಸೂರಿನ ಪುರಭವನದಲ್ಲಿ ಪ್ಲೀನಮನ್ನು ಉದ್ಘಾಟನೆ ಮಾಡುತ್ತಾ ಕಾಂ. ಇ. ಎಂ. ಎಸ್. ನಂಬೂದಿರಿಪಾದ್ ಅವರು ಮಾತನಾಡುತ್ತಲಿರುವರು.

ಪಕ್ಷದ ಸಂಘಟನೆಯನ್ನು ಬಲಪಡಿಸಿ, ಜನತೆಯ ಹೋರಾಟಗಳನ್ನು ಬೆಳೆಸಲು ಪ್ಲೀನಮ್ ಕರೆ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಅನುಸರಿಸಿಕೊಂಡು ಬಂದಿರುವ ಧೋರಣೆಗಳು ಹೆಚ್ಚು ಕಡಿಮೆ ಸರಿಯಾದುವು ಎಂಬುದನ್ನು ಘಟನೆಗಳು ತೋರಿಸಿಕೊಟ್ಟಿವೆ. ಬಲಪಕ್ಷೀಕರಣವಾದ ಮತ್ತು ಎಡ ಸಾಹಸವಾದಗಳ ವಿರುದ್ಧ ನಡೆಸಿದ ಸತತ ಹೋರಾಟದ ಫಲವಾಗಿ ನಮ್ಮ ಪಕ್ಷದ ಇಂದಿನ ರಾಜಕೀಯ, ಸಂಘಟನಾತ್ಮಕ ಧೋರಣೆಗಳು ರೂಪಿತವಾಗಿವೆ. ಕಾರ್ಮಿಕ ವರ್ಗದ ಅಂತರಾಷ್ಟ್ರೀಯತೆಯನ್ನು ಸರಿಯಾಗಿ ಅನುಸರಿಸುವುದರಿಂದಲಾಗಿ, ಇಂದು ಅಂತರಾಷ್ಟ್ರೀಯ ಸೌಹಾರ್ದತೆಯೂ ಹೆಚ್ಚುತ್ತಿದೆ. ರಾಷ್ಟ್ರಮಟ್ಟದಲ್ಲಿ ಒಂದು ಎಡ ಪ್ರಜಾಪ್ರಭುತ್ವ ಬದಲಿಯನ್ನು ರೂಪಿಸುವ ಸಾಧ್ಯತೆಗಳು ಈಗ ಹೆಚ್ಚಾಗಿವೆ. ಇದರಲ್ಲಿ ನಮ್ಮ ಪಕ್ಷದ ಪಾತ್ರ ಹಿರಿದು. ಸಂಯುಕ್ತ ಚಳುವಳಿಯ ಮೂಲಕ ಎಡ ಪ್ರಜಾಪ್ರಭುತ್ವ ಬದಲಿಯೊಂದನ್ನು ರೂಪಿಸುವತ್ತ ಮುನ್ನಡೆಯಬೇಕು.



28-12-80 ಸಂಜೆ ಮೈಸೂರು ನಗರದ ಪುರಭವನ ಮೈದಾನದಲ್ಲಿ ಸೇರಿದ್ದ ಭಾರಿ ಬಹಿರಂಗ ಸಭೆಯ ಒಂದು ದೃಶ್ಯ. ಕಾಂ. ಎಂ. ಕೆ. ಭಟ್ ಭಾಷಣ ಮಾಡುತ್ತಿರುವುದನ್ನು ಕಾಣಬಹುದು,

ಪಕ್ಷದ ಸಂಘಟನೆಯನ್ನು ಬಲಪಡಿಸಿ, ವ್ಯಾಪಕವಾಗಿ ಬೆಳೆಸಿಕೊಳ್ಳದಿದ್ದರೆ ನಮ್ಮ ಜವಾಬ್ದಾರಿಯನ್ನು ನಿರ್ವಹಿಸುವುದು ಅಸಾಧ್ಯ. ಪಕ್ಷದ ನಿಶ್ಶಕ್ತಿಯನ್ನು ಹೋಗಲಾಡಿಸಿ, ರಾಷ್ಟ್ರಮಟ್ಟದಲ್ಲೊಂದು ಪ್ರಬಲ ರಾಜಕೀಯ ಶಕ್ತಿಯನ್ನಾಗಿಸುವಂತೆ ಮಾಡುವತ್ತ ಸಾಲ್ಕಿಯಾ ಪ್ಲೀನಮ್ ಹಲವು ನಿರ್ಣಯಗಳನ್ನು ಮಾಡಿದೆ. ಕರ್ನಾಟಕದಲ್ಲಿ ಪಕ್ಷದ ಸಂಘಟನೆಯನ್ನು ಬೆಳೆಸಲು ಉತ್ತಮ ಅವಕಾಶಗಳಿವೆ. ಇತ್ತೀಚಿನ ದಿನಗಳಲ್ಲಿ ತೀವ್ರವಾಗಿ ಬೆಳೆಯುತ್ತಿರುವ ಕಾರ್ಮಿಕವರ್ಗದ ಹೋರಾಟ ಒಂದೆಡೆ; ಮಲಪ್ರಭದಿಂದ ಪ್ರಾರಂಭಗೊಂಡು ಕೋಲಾರ ಜಿಲ್ಲೆಯಲ್ಲಿ 10500 ಮಂದಿಗಿಂತಲೂ ಹೆಚ್ಚಾಗಿ ಬಂಧನಕ್ಕೊಳಗಾಗಿ ನಡೆದಿರುವ ರೈತಚಳುವಳಿ ಇನ್ನೊಂದೆಡೆ ಇದೆ. ವಿದ್ಯಾರ್ಥಿ, ಯುವಜನತೆ, ಮಹಿಳೆಯರು ಮತ್ತಿತರ ವಿಭಾಗಗಳ ಹೋರಾಟವೂ, ಸಾಂಸ್ಕೃತಿಕ ಸಾಹಿತ್ಯ ಚಳುವಳಿಗಳೂ ಬೆಳೆದಿವೆ. ಈ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಸಾಮೂಹಿಕ ಕ್ರಾಂತಿಕಾರಿ ಪಕ್ಷವನ್ನು ಬೆಳೆಸುವುದು ಸಾಧ್ಯವಿದೆ. ಸಾಮೂಹಿಕ ಕ್ರಾಂತಿಕಾರಿ ಪಕ್ಷವೆಂದರೆ ಸಡಿಲವಾಗಿರುವ ಸಾಮೂಹಿಕ

(ಕಡೇ ಪುಟ ನೋಡಿ)

ಸಂಕ್ಷಿಪ್ತ ಸಮಾಚಾರಗಳು

ಬೀದರ್ ಡಿವೈಓ ಮನವಿ

ಕರ್ನಾಟಕ ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯು ಬೀದರ್ ಘಟಕವು, ಜಿಲ್ಲೆಯಲ್ಲಿ ಕಾಳಸಂತೆಕೋರರು ಲಾಭಕೋರರು ಇವರ ಉಪಟಳ ಹೆಚ್ಚಿದ್ದು ಜನತೆಗೆ ಕಷ್ಟವಾಗುತ್ತಿದೆಯೆಂದೂ, ಜನರಿಗೆ ಹೊಸ ರೇಷನಿಂಗ್ ವ್ಯವಸ್ಥೆಯನ್ನು ಜಾರಿಮಾಡಬೇಕೆಂದೂ ಕೇಳಿಕೊಂಡಿದ್ದಾರೆ. ಈ ಬಗ್ಗೆ ಕಂದಾಯ ಮಂತ್ರಿಗಳಿಗೆ ಮನವಿ ಸಲ್ಲಿಸಿದ್ದಾರೆ. ಬೀದರ ಜಿಲ್ಲೆಯ ಪದವೀಧರರಿಗೆ ನಿರುದ್ಯೋಗ ಭತ್ಯೆಯನ್ನು ಒದಗಿಸಿ ಅದನ್ನು 300ಕ್ಕೆ ಏರಿಸಬೇಕು ಎಂದು ರಾಜ್ಯಪಾಲರಿಗೆ ಅವರು ಮನವಿ ಅರ್ಪಿಸಿದ್ದಾರೆ. ಬೀದರ್ ಶಾಖೆ ಪ್ರತಿ ರವಿವಾರ ಚರ್ಚೆಗಳನ್ನು ನಡೆಸಲಿದೆ.

ಚಿಕ್ಕಮಗಳೂರಿನಲ್ಲಿ ನೌಕರರ ಸಭೆ

ಚಿಕ್ಕಮಗಳೂರು-ಹಾಸನ ಜಿಲ್ಲೆಯ ಶಾಮಿಲ್ಸ್ ಮತ್ತು ಜನರಲ್ ವರ್ಕರ್ಸ್ ಯೂನಿಯನ್‌ನ ಸರ್ವಸದಸ್ಯರ ಸಭೆ 21-12-1980ರಂದು ಚಿಕ್ಕಮಗಳೂರಿನಲ್ಲಿ ನಡೆಯಿತು. ಕಾಂ. ಸಿ. ನಂಜುಂಡಪ್ಪ ಅಧ್ಯಕ್ಷತೆ ವಹಿಸಿದ್ದರು. ವರದಿ, ಲೆಕ್ಕಪತ್ರ ಅಂಗೀಕರಿಸಿದ ನಂತರ ಹೊಸ ಕಾರ್ಯಕಾರಿ ಸಮಿತಿಯನ್ನು ಚುನಾಯಿಸಲಾಯಿತು. ಸಿ. ನಂಜುಂಡಪ್ಪ (ಅಧ್ಯಕ್ಷ) ಎಂ. ಸಿ. ಕೇಶವ (ಉಪಾಧ್ಯಕ್ಷ) ಎ. ಕೆ. ವಿಶ್ವನಾಥ್ (ಕಾರ್ಯದರ್ಶಿ) ಆರ್. ಡಿ. ಮೆಲ್ಕಿಯೋರ್ (ಉಪಕಾರ್ಯದರ್ಶಿ) ಸುಬ್ಬಯ್ಯ (ಖಜಾಂಚಿ). ಅಗತ್ಯ ವಸ್ತುಗಳ ಬೆಲೆ ಇಳಿಕೆ, ರೈತರ ಬೆಳೆಗೆ ನ್ಯಾಯಬೆಲೆ ಇವುಗಳನ್ನು ಒತ್ತಾಯಿಸುವ ಗೊತ್ತುವಳಿಯನ್ನು ಸಭೆ ಸ್ವೀಕರಿಸಿತು. ಕುದುರೆಮುಖದಲ್ಲಿ ರಿಟ್ರೆಂಚ್ ಆದ ಕಾರ್ಮಿಕರನ್ನು ಪುನರ್ ನೇಮಕ ಮಾಡಬೇಕೆಂದು ಸಭೆ ಒತ್ತಾಯಿಸಿತು. ಕಾಫಿ ಕ್ಯೂರಿಂಗ್ ನೌಕರರ ವೇತನ ಏರಿಕೆ ಜಾರಿಗೆ ಬರಲಿ ಎಂದು ಸರ್ಕಾರವನ್ನು ಸಭೆ ಒತ್ತಾಯಿಸಿತು.

ಅತ್ತಾವರ ಗ್ರಾಮಸಂಘ ಸಭೆ

ಮಂಗಳೂರಿನ ಅತ್ತಾವರದ ಗ್ರಾಮಸಂಘದ ವಾರ್ಷಿಕ ಮಹಾಸಭೆಯು 14-12-80ರಂದು ನಡೆಯಿತು. ಬಿ. ವಿಶ್ವನಾಥಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಗ್ರಾಮಸಂಘದ ಅಧ್ಯಕ್ಷರಾಗಿದ್ದ ದಿ. ಪಿ. ಕೆ. ನಾರಾಯಣ ಅವರ ನಿಧನಕ್ಕೆ ಎರಡು ನಿಮಿಷ ಮೌನ ಆಚರಿಸಲಾಯಿತು. ನಂತರ ವರದಿ, ಲೆಕ್ಕಪತ್ರಗಳನ್ನು ಸಭೆ ಅಂಗೀಕರಿಸಿದನಂತರ ನೂತನ ಪದಾಧಿಕಾರಿಗಳನ್ನು ಚುನಾಯಿಸಲಾಯಿತು. ಬಿ ವಿಶ್ವನಾಥಶೆಟ್ಟಿ (ಅಧ್ಯಕ್ಷ) ಬಿ. ರವೀಂದ್ರಕುಮಾರ್ (ಉಪಾಧ್ಯಕ್ಷ) ಆರ್. ಎಸ್. ಕಿಣಿ (ಕೋಶಾಧ್ಯಕ್ಷ) ವಿಶ್ವನಾಥ ಕರ್ಕೇರಾ (ಕಾರ್ಯದರ್ಶಿ) ಸುಕುಮಾರ್ ಕೋಟ್ಯಾನ್ (ಉಪಕಾರ್ಯದರ್ಶಿ) ಮತ್ತು ಎಂಟು ಸದಸ್ಯರು ಆಯ್ಕೆಯಾದರು.

ಶಿಡ್ಲಘಟ್ಟ ಶಾಖೆಯ ಒತ್ತಾಯ

ಶಿಡ್ಲಘಟ್ಟ ಟೌನಿಗೆ ಸೀಮೆಎಣ್ಣೆ ಸರಬರಾಜು ಸರಿಯಾಗಿ ಆಗುತ್ತಿಲ್ಲ, ವಿತರಣೆಯೂ ಸರಿಯಾಗಿಲ್ಲದೆ ಜನರು ತೊಂದರೆಗೊಳಗಾಗಿದ್ದಾರೆ. ಈ ಬಗ್ಗೆ ತಹಸೀಲ್ದಾರ್ ಏನೂ ಕ್ರಮ ಕೈಗೊಂಡಿಲ್ಲ. ಸೀಮೆಎಣ್ಣೆ ಮಾರಾಟ ವೇಳೆಯ ನಿಗದಿ ಮತ್ತು ಪಡಿತರ ಕಾರ್ಡ್ ಮೇರೆಗೆ ವಿತರಣೆ ಇವನ್ನು ಒತ್ತಾಯಿಸಲು ಮಾರ್ಕ್ಸ್‌ವಾದಿ ಪಕ್ಷದ ಶಿಡ್ಲಘಟ್ಟ ಶಾಖೆ 29-12-80ರ ಸಂಜೆ ಪಂಜು ಮೆರವಣಿಗೆ ಮತ್ತು ಬಹಿರಂಗ ಸಭೆ ನಡೆಸಿತು.

ಅರಮೇರಿಯಲ್ಲಿ ಎ.ಕೆ.ಜಿ. ಕ್ಲಬ್ ದಿನ

ಅರಮೇರಿಯಲ್ಲಿ 20-12-80 ರಂದು ಎ ಕೆ ಜಿ ಕ್ಲಬ್ ದಿನಾಚರಣೆಯನ್ನು ಆಚರಿಸಲಾಯಿತು. ಆಟೋಟಗಳ ಸ್ಪರ್ಧೆಯ ನಂತರ ಮಧ್ಯಾಹ್ನ ಎರಡು ಗಂಟೆಗೆ ಸಭೆ ನಡೆಯಿತು. ಇದರ ಅಧ್ಯಕ್ಷತೆಯನ್ನು ಐ. ಆರ್. ಅಪ್ಪಣ್ಣ ಅವರು ವಹಿಸಿದ್ದರು. ಕೆ. ಎ. ಮುತ್ತಪ್ಪ ಮತ್ತು ಹೆಚ್. ಎನ್. ಗಣೇಶ ಅವರು ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಸಂಜೆ ತಂದಿ ಅನಸೂಯ ಎಂಬ ನಾಟಕವನ್ನು ಲತೀಫ್ ಕುರಿಯನ್ ಉದ್ಘಾಟಿಸಿದರು.

ಮಂಜೇಶ್ವರ ರೈತಸಂಘ ಸಮ್ಮೇಳನ

ಮಂಜೇಶ್ವರ ಬ್ಲಾಕ್ ರೈತಸಂಘ ಸಮ್ಮೇಳನದ ಸಿದ್ಧತಾ ಸಭೆಯು 21-12-80ರಂದು ಕುಂಬಳೆಯಲ್ಲಿ ನಡೆಯಿತು. ಮದನಮಾಸ್ಟರ್ ಅವರು ಅಧ್ಯಕ್ಷತೆ ವಹಿಸಿದ್ದರು. ಸಭೆಯಲ್ಲಿ ಎಂ ರಾಮಚಂದ್ರಗಟ್ಟಿ ಅವರು ಅಧ್ಯಕ್ಷರೂ, ಎ. ಅಬ್ದುಬೀರ್ ಅವರು ಕಾರ್ಯದರ್ಶಿಯಾಗಿಯೂ ಇರುವ ಹತ್ತು ಜನರ ಸ್ವಾಗತ ಸಮಿತಿಯನ್ನು ರಚಿಸಲಾಯಿತು. ರೈತಸಂಘದ ವಾರ್ಷಿಕ ಸಮ್ಮೇಳನ ಜನವರಿ 3,4 ರಂದು ಕುಂಬಳೆಯಲ್ಲಿ ಜರುಗಲಿದೆ.

ದ.ಕ. ಜಿಲ್ಲಾ ಡಿವೈಓ ಸಭೆ

ದ. ಕನ್ನಡ ಜಿಲ್ಲೆಯ ಯುವಜನ ಸಂಘಟನೆಯ ಜಿಲ್ಲಾ ಸಮಿತಿ ಸಭೆಯು 5-12-80ರಂದು ಸೇರಿತ್ತು. ಕೆ. ಶಂಕರ ಅವರು ಅಧ್ಯಕ್ಷರಾಗಿದ್ದರು. ರಾಜ್ಯಸಂಚಾಲಕರಾದ ಶ್ರೀರಾಮರೆಡ್ಡಿ ಅವರು ಸಭೆಯಲ್ಲಿ ಹಾಜರಿದ್ದು ಮಾತನಾಡಿದರು.

ಶಿವಮೊಗ್ಗ ಅಕ್ಕಿಗಿರಣಿ ಕಾರ್ಮಿಕರ ಬೇಡಿಕೆ

ಶಿವಮೊಗ್ಗ ಜಿಲ್ಲೆಯ ಅಕ್ಕಿಗಿರಣಿ ಕೆಲಸಗಾರರ ಮತ್ತು ಹಮಾಲಿ ಕಾರ್ಮಿಕರ ಸಂಘವು ಕಾರ್ಮಿಕರ ಕೆಲವು ತುರ್ತುಬೇಡಿಕೆಗಳ ಈಡೇರಿಕೆಗಾಗಿ 18-12-80ರಂದು ಮತಪ್ರದರ್ಶನ ನಡೆಸಿದರು. ಸಂಘದ ಕಚೇರಿಯಿಂದ 1500 ಕಾರ್ಮಿಕರು ಮೆರವಣಿಗೆ ಹೊರಟು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು. ತಿರುಕಪ್ಪ, ಚಂದುಕುಟ್ಟಿ, ಶಿವಶಂಕರ್, ಖಾಸಿಂಸಾಬ್ ಇವರು ಮೆರವಣಿಗೆಯ ನೇತೃತ್ವ ವಹಿಸಿದ್ದರು.

ಧಾರವಾಡ

ಡಿಸೆಂಬರ್ 9ರಂದು ಧಾರವಾಡದಲ್ಲಿ ಡಿ ವೈ ಓ ಜಿಲ್ಲಾ ಘಟಕವೊಂದನ್ನು ಪ್ರಾರಂಭಿಸಲಾಯಿತು. ಸಭೆಯಲ್ಲಿ ಡಿ. ವೈ. ಓ. ನ ರಾಜ್ಯ ಘಟಕದ ಸಂಚಾಲಕರಲ್ಲೊಬ್ಬರಾದ ಕಾಂ. ಶ್ರೀರಾಂರೆಡ್ಡಿಯವರು ಭಾಗವಹಿಸಿದ್ದರು. ಯುವಜನತೆ ಎಲ್ಲ ರಂಗಗಳಲ್ಲಿ ಎದುರಿಸುತ್ತಿರುವ ಸಮಸ್ಯೆಗಳ ವಿರುದ್ಧ ಹೋರಾಡಲು ಕಾಂ ರೆಡ್ಡಿ ಕರೆಕೊಟ್ಟರು. ಕಾಂ. ಏ ಜಿ. ಕಮ್ಮಾರರವರು ಸಂಚಾಲಕರಾಗಿರುವ 9 ಜನರ ಸಮಿತಿಯೊಂದನ್ನು ಆಯ್ಕೆಮಾಡಲಾಯಿತು.

○

ಪೋಲೀಸರಿಂದ ಹಲ್ಲೆ, ದರೋಡೆ

ಬೇಲಿಯೇ ಎದ್ದು ಹೊಲ ಮೇಯ್ದಂತೆ ಎಂಬ ನಾಣ್ಣುಡಿಯಂತೆ ಜನರ ರಕ್ಷಣೆಯ ಹೊಣೆಹೊತ್ತಿರುವ ಪೋಲೀಸರೇ ಸ್ವಯಂ ಲೂಟಿ, ದರೋಡೆಯಲ್ಲಿ ಭಾಗಿಯಾದ ಘಟನೆಯು ವರದಿಯಾಗಿದೆ

ಬೆಂಗಳೂರು ಜಿಲ್ಲೆಯ ಮಾಗಡಿ ತಾಲ್ಲೂಕಿನ ಬ್ಯಾಡರಹಳ್ಳಿ ಗ್ರಾಮದಲ್ಲಿರುವ ದೊಡ್ಡಕಟ್ಟೆ, ಚಿಕ್ಕಕಟ್ಟೆ ಮತ್ತು ಈರಣ್ಣನ ಕಟ್ಟೆಗಳಿಂದ ಗ್ರಾಮದ ರೈತರಿಗೆ ನೀರಾವರಿಯ ಸೌಲಭ್ಯವಿದ್ದು, ಒಟ್ಟು 100 ಎಕರೆ ಜಮೀನಿಗೆ ನೀರು ಸರಬರಾಜು ಆಗುತ್ತಿದೆ. ಗ್ರಾಮದ ರೈತರು ನೀರಾವರಿ ತೆರಿಗೆ ಕೊಡುತ್ತಿರುವ ದಾಖಲೆ ಸರ್ಕಾರದ ಬಳಿ ಇದೆ. ಈ ಕಟ್ಟೆಗಳ ನೀರು ಅಕ್ಕಪಕ್ಕದ ಗ್ರಾಮದ ರೈತರ ದನಕರುಗಳಿಗೂ ಅನುಕೂಲವಾಗುತ್ತಿದೆ.

ಈ ಕಟ್ಟೆಗಳ ಅಕ್ಕಪಕ್ಕದಲ್ಲಿರುವ ಭೂಮಾಲೀಕರಾದ ನರಸಿಂಹಯ್ಯನ ಮಕ್ಕಳಾದ ನಿಂಗಯ್ಯ, ರಾಮಚಂದ್ರಯ್ಯ ಎಂಬಿಬ್ಬರು ಕಟ್ಟೆಗಳನ್ನು ತಮ್ಮ ಖಾಸಗೀ ಸ್ವತ್ತನ್ನಾಗಿ ಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದು ಅವರ ಈ ಘನ (?) ಕಾರ್ಯಕ್ಕೆ ಹೆಂಗಳೂರಿನಲ್ಲಿ ಖಾದೀ ಬೋರ್ಡಿನಲ್ಲಿ ಉದ್ಯೋಗಿಯಾಗಿರುವ ಶ್ರೀಮಾನ್ ನರಸಿಂಹಯ್ಯನವರು ಕುಮ್ಮಕ್ಕು ಕೊಡುತ್ತಿದ್ದಾರೆ. ಈ ಸಂಬಂಧದಲ್ಲಿ ನ್ಯಾಯಾಲಯದಲ್ಲಿ ವಿವಾದ ಇದ್ದು ರೈತರು [illegible] ಬಿ ನಾರಾಯಣ ಗೌಡರ ನೇತೃತ್ವದಲ್ಲಿ ವ್ಯಾಜ್ಯ ನಡೆಸುತ್ತಿದ್ದಾರೆ.

ನೆಲಮಂಗಲದಲ್ಲಿರುವ ಪೋಲೀಸ್ ಸರ್ಕಲ್ ಇನ್‌ಸ್ಪೆಕ್ಟರ್ ಶ್ರೀ ವೀರಯ್ಯ ಎಂಬಾತ ಭೂಮಾಲೀಕರಾದ ನಿಂಗಣ್ಣ, ರಾಮಚಂದ್ರಯ್ಯ ಇವರ ಹತ್ತಿರದ ಸಂಬಂಧಿಗಳಾಗಿದ್ದು ಭೂಮಾಲೀಕರಿಗೆ ಬೆಂಗಾವಲಾಗಿ ನಿಂತಿರುವನು. ಡಿಸೆಂಬರ್ 8ರಂದು ತಮ್ಮ ಆಪ್ತರನ್ನು ತೃಪ್ತಿಗೊಳಿಸಲೋಸುಗ ಈ ವೀರಯ್ಯನು ಕುದೂರು ಸಬ್‌ಇನ್‌ಸ್ಪೆಕ್ಟರ್ ಮುನಿಯಪ್ಪನನ್ನೂ ಮತ್ತು ಚಂಡಾಳಚೌಕಳಿ (ಸಿಬ್ಬಂದಿ)ಯನ್ನು ಕರೆದುಕೊಂಡು ಬ್ಯಾಹರಹಳ್ಳಿ ಗ್ರಾಮಕ್ಕೆ ನುಗ್ಗಿ ತಮ್ಮ ಪರಾಕ್ರಮ ಪ್ರದರ್ಶಿಸಿದ್ದಾರೆ. ಈ ಹೇಯ ಕೃತ್ಯವನ್ನು ಪ್ರಶ್ನಿಸಿದ ಹೆಂಗಸರ ಮೇಲೂ ಕೈಮಾಡುವ ಕೊಬ್ಬನ್ನು ತೋರಿಸಿದ್ದಾರೆ. ಜಮೀನ್ದಾರರು ತೋರಿಸಿದ ಪ್ರತಿ ಮನೆಗೂ ನುಗ್ಗಿ ಹಾಡೇಹಗಲು ದರೋಡೆಮಾಡಿದ್ದಾರೆ, ಗೋವಿಂದಪ್ಪ ಎಂಬ ಬಡಪಾಯಿ ರೈತ ಎತ್ತುಕೊಳ್ಳಲು ಹೊಂದಿಸಿಟ್ಟಿದ್ದ 2100 ರೂ.ಗಳನ್ನು, ಕೆಲವು ರೈತರನ್ನು, ಹೆಂಗಸರು-ಮಕ್ಕಳನ್ನು ಸ್ಟೇಷನ್ನಿಗೆ ಎಳೆದೊಯ್ದು ಎರಡು ದಿನಗಳ ನಂತರ ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದಾರೆ.

ಗ್ರಾಮದ ರೈತರು ಮತ್ತು ಜಮೀನ್ದಾರರ ನಡುವಿರುವ ವ್ಯಾಜ್ಯದಲ್ಲಿ ನ್ಯಾಯಾಲಯ ರೈತರ ಪರವಾಗಿ ತಡೆ ಆಜ್ಞೆ (stay order) ನೀಡಿದ್ದರೂ ಪೋಲೀಸರು ಹುಚ್ಚನಾಯಿಗಳ ಹಾಗೆ ಗ್ರಾಮಕ್ಕೆ ನುಗ್ಗಿ ಮೇಲಿಂದ ಮೇಲೆ ತೊಂದರೆಕೊಡುತ್ತಿದ್ದಾರೆ,

ಪ್ರತಿಭಟನೆ :

ಮಾಗಡಿ ತಾಲ್ಲೂಕಿನ ಈ ಹಳ್ಳಿಯಲ್ಲಿ ನಡೆದಿರುವ ಅಮಾನುಷ ಕೃತ್ಯವನ್ನು ಪ್ರತಿಭಟಿಸಲು ಬೆಂಗಳೂರು ಜಿಲ್ಲಾ ರೈತಸಂಘವು ಕಾರ್ಯಪ್ರವೃತ್ತವಾಯಿತು. ಬೆಂಗಳೂರು ಜಿಲ್ಲಾ ರೈತಸಂಘದ ಕಾರ್ಯದರ್ಶಿ ಕಾಂ. ಪಿ ಜಗನ್ನಾಥ ಹಳ್ಳಿಗಳಿಗೆ ಭೇಟಿ ಕೊಟ್ಟು ಪ್ರತಿಭಟನಾ ಸಭೆಯನ್ನು ವ್ಯವಸ್ಥೆ ಮಾಡಿದರು. ದಿನಾಂಕ 29-12-80ರಂದು ಗುಡೇಮಾರನಹಳ್ಳಿಯಲ್ಲಿ ಸಭೆ ಏರ್ಪಾಡಾಯಿತು. ಅಂದು ಸುಮಾರು 700-800 ರೈತರು ಪೋಲೀಸ್ ದೌರ್ಜನ್ಯವನ್ನು ಖಂಡಿಸುವ ಘೋಷಣೆಗಳನ್ನು ಕೂಗುತ್ತಾ ಬ್ಯಾಡರಹಳ್ಳಿಯಿಂದ ಮೆರವಣಿಗೆ ಹೊರಟು 1 ಕಿ ಮಿ. ದೂರದ ಗುಡೇಮಾರನಹಳ್ಳಿಯಲ್ಲಿ ಸಮಾವೇಶಗೊಂಡರು. ಸಾಯಂಕಾಲ 6 ಘಂಟೆಗೆ ಪ್ರಾರಂಭವಾದ ಸಭೆಯಲ್ಲಿ ಸುಮಾರು 2000ಕ್ಕಿಂತಲೂ ಹೆಚ್ಚು ಜನರು ಭಾಗವಹಿಸಿದ್ದರು.

ಪಂಚಾಯ್ತಿಯ ಮಾಜೀ ಚೇರ್ಮನ್‌ರಾದ ಶ್ರೀ ಗಂಗಣ್ಣನವರ ಅಧ್ಯಕ್ಷತೆಯಲ್ಲಿ ನಡೆದ ಈ ಸಭೆಯಲ್ಲಿ, ಪ್ರಾಂತ ರೈತಸಂಘದ ಅಧ್ಯಕ್ಷರಾದ ಕಾಂ. ಮುಗುವಾಳಪ್ಪ, ಜಿಲ್ಲಾ ರೈತಸಂಘದ ಕಾರ್ಯದರ್ಶಿ ಕಾಂ ಪಿ. ಜಗನ್ನಾಥ, ರಾಜ್ಯ ಸಿ.ಐ.ಟಿ.ಯು. ಕಾರ್ಯದರ್ಶಿ ಕಾಂ. ದಸ್ತಗೀರಸಾಬ್, ಕಾಂ. ಅಂಜನಪ್ಪ ಮತ್ತು ಕಾಂ. ಲಿಂಗದೇವರು ಮೊದಲಾದವರು ಭಾಗವಹಿಸಿದ್ದರು,

ಪೋಲೀಸ್ ದೌರ್ಜನ್ಯ ಖಂಡಿಸಿದ ಭಾಷಣಕಾರರು, ಇತ್ತೀಚೆಗೆ ತಾನೇ ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲ್ಲೂಕಿನಲ್ಲಿ ಹರಿಜನ ಕೃಷಿಕೂಲಿಕಾರರ ಮೇಲೆ ಜಮೀನ್ದಾರರ ಹಲ್ಲೆಯನ್ನು ಉದಾಹರಿಸಿದರು. ವ್ಯವಸ್ಥೆಯ ಶಿಕ್ಷಕರಾಗಿರುವ ಪೋಲೀಸರ ದೌರ್ಜನ್ಯವನ್ನು ಎದುರಿಸಲು ಸಂಘಟಿತರಾಗಬೇಕಾದ ಅವಶ್ಯಕತೆಯನ್ನು ಒತ್ತಿ ಹೇಳಿದರು.

ಸಭೆಯ ಕೊನೆಯಲ್ಲಿ, ಬ್ಯಾಡರಹಳ್ಳಿ ರೈತರ ಮೇಲೆ ದಾಖಲಾಗಿರುವ ಸುಳ್ಳು ಪೋಲೀಸ್ ಕೇಸುಗಳನ್ನು ವಾಪಸ್ಸು ತೆಗೆದುಕೊಳ್ಳಬೇಕು. ಲೂಟಿ ಮಾಡಿರುವ ರೈತರ ಸ್ವತ್ತುಗಳನ್ನು ತಕ್ಷಣ ವಾಪಸ್ಸು ಮಾಡಬೇಕು ಮತ್ತು ಈ ಪೈಶಾಚಿಕ ಕೃತ್ಯದ ಮುಂದಾಳು ಸರ್ಕಲ್ ಇನ್‌ಸ್ಪೆಕ್ಟರ ವೀರಯ್ಯನನ್ನು ತಕ್ಷಣ ಸಸ್ಪೆಂಡ್ ಮಾಡಬೇಕು ಎಂಬ ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು. 15 ದಿನಗಳೊಳಗೆ ಸೂಕ್ತ ಕ್ರಮಕೈಕೊಳ್ಳದಿದ್ದಲ್ಲಿ ನೆಲಮಂಗಲದ ಪೋಲೀಸ್ ಸ್ಟೇಷನ್‌ನ ಮುಂದೆ ವೀರಯ್ಯನನ್ನು ಸಸ್ಪೆಂಡ್ ಮಾಡುವವರೆಗೆ ಧರಣಿ ಸತ್ಯಾಗ್ರಹ ಕೈಗೊಳ್ಳಲೂ ತೀರ್ಮಾನಿಸಲಾಯಿತು.

ಈ ಬಗ್ಗೆ ಜಿಲ್ಲಾ ರೈತಸಂಘ ಐ.ಜಿ.ಪಿ., ಡಿ.ಐ.ಜಿ., ಎಸ್ ಪಿ. ಮೊದಲಾದ ಅಧಿಕಾರಿಗಳಿಗೂ ಮತ್ತು ಮುಖ್ಯಮಂತ್ರಿಗೂ ದೂರುಕೊಟ್ಟಿದೆ.

ಬೆಳೆಯುತ್ತಿರುವ ಸಂಘಟನೆ, ಹೋರಾಟಗಳನ್ನು ದಬ್ಬಾಳಿಕೆಯಿಂದ ಹತ್ತಿಕ್ಕುವುದು ಸಾಧ್ಯವೇ ಇಲ್ಲವೆಂಬುದನ್ನು ಸರಕಾರ, ಪೋಲೀಸ್ ಇಲಾಖೆ ಬೇಗನೇ ಮನಗಾಣುವುದು ಅವಶ್ಯವಿದೆ.

○

ಆರ್ಥಿಕ ಸಮೀಕ್ಷೆ :

ತೆರಿಗೆ ಬೇಡ ದಾನ ಕೊಡಿ!

ಆರ್. ಚಂದ್ರ

ಕರ್ನಾಟಕದ ಮುಖ್ಯಮಂತ್ರಿ ಗುಂಡೂರಾವ್ ಏನಾದರೂ ಮಾಡಿ ಹೇಗಾದರೂ ಮಾಡಿ ಧಿಡೀರ್ ಜನಪ್ರಿಯತೆ ಗಿಟ್ಟಿಸಲು ಸತತ ಹೆಣಗಾಡುತ್ತಿದ್ದಾರೆ! ನಿಂತಲ್ಲಿ ನಿರ್ಧಾರ ಕೈಕೊಳ್ಳುವವರೆಂದೂ ಹೆಸರುಗಳಿಸಿದ್ದಾರೆ! ರಾಜ್ಯದ ತೆರಿಗೆ ಮತ್ತು ಭೂಸುಧಾರಣಾ ನೀತಿಗಳಲ್ಲಿ ಇವರು ಇತ್ತೀಚೆಗೆ ಕೈಕೊಂಡ ನಿರ್ಧಾರವೊಂದು ನಿಜವಾಗಿಯೂ ಕ್ರಾಂತಿಕಾರಕ!

ರಾಜ್ಯದ ಮಾರ್ಚ್ 80ರ ಮುಂಗಡ ಪತ್ರದಲ್ಲಿ ತೋಟಗಾರಿಕೆಯ ಆದಾಯದ ತೆರಿಗೆಯ ಮೇಲೆ ಶೇ 10ರ ದರದಲ್ಲಿ ಮೇಲ್ತೆರಿಗೆ (Surcharge) ವಿಧಿಸಲು ನಿರ್ಧರಿಸಲಾಗಿತ್ತು. ಇದರಿಂದ ಸರಕಾರಕ್ಕೆ ರೂ. 1.45 ಕೋಟಿ ಹೆಚ್ಚು ವಾರ್ಷಿಕ ವರಮಾನ ಸಿಗಬಹುದೆಂದು ನಿರೀಕ್ಷಿಸಲಾಗಿತ್ತು. ಎರಡೂ ಸದನಗಳಲ್ಲಿ ಈ ಹೊಸ ತೆರಿಗೆಗೆ ಮಂಜೂರಾತಿ ಸಿಕ್ಕಿ ಅದು ರಾಜ್ಯದ ತೆರಿಗೆ ಶಾಸನದ ಒಂದು ಅವಿಭಾಜ್ಯ ಅಂಶವಾಗಿತ್ತು. ಆದರೆ, ರಾಜ್ಯದ ತೋಟಗಾರಿಕೆಯ ಬಲಿಷ್ಠ ಮಾಲಕರಿಗೆ ಈ ಹೊಸ ತೆರಿಗೆಯ ಭಾರವನ್ನು ಹೇಗಾದರೂ ಜಾರಿಸಿಕೊಳ್ಳಬೇಕೆಂದಿತ್ತು. ಇದಕ್ಕೊಂದು ಉಪಾಯ ಹೂಡಲಾಯಿತು.

ನವೆಂಬರ್ 80ರ ಮೊದಲ ಭಾಗದಲ್ಲಿ ಬೆಂಗಳೂರಿನಲ್ಲಿ ನಡೆದ ತೋಟಗಾರಿಕೆಯ ಮಾಲಕರ ರಾಜ್ಯಮಟ್ಟದ ಸಂಘಟನೆಯ ಮಹಾ ಅಧಿವೇಶನಕ್ಕೆ ಮುಖ್ಯಮಂತ್ರಿ ಗುಂಡೂರಾಯರನ್ನೇ ವಿಶೇಷವಾಗಿ ಆಹ್ವಾನಿಸಲಾಯಿತು. ಮಾನ್ಯ ಮುಖ್ಯಮಂತ್ರಿಯವರು ತೋಟಗಾರಿಕೆಯ ಮಾಲಕರ ಆತಿಥ್ಯಕ್ಕೆ ಮನಸೋತು ಅವರ ವರಮಾನದ ಮೇಲೆ ವಿಧಿಸಿರುವ ಮೇಲ್ತೆರಿಗೆಯನ್ನು ರದ್ದುಗೊಳಿಸಲಾಗಿದೆ ಎಂದು ನಿಂತಲ್ಲಿಯೇ ತಮ್ಮ ನಿರ್ಧಾರ ಹೇಳಿಬಿಟ್ಟರು! ಮುಖ್ಯಮಂತ್ರಿಗಳ ಮೂಡ್ ನೋಡಿ ತೋಟಗಾರಿಕೆಯ ಮಾಲೀಕರು ಇನ್ನೂ ಒಂದು ವರ ಬೇಡಿದರು. ತಾವು ಅಕ್ರಮವಾಗಿ, ಕಾನೂನು ಬಾಹಿರವಾಗಿ ಇದುವರೆಗೆ ವಶಪಡಿಸಿಕೊಂಡ ವಿಶಾಲ ಭೂಭಾಗದ ಒಡೆತನವನ್ನು ತಮಗೆ ಕೊಡಬೇಕೆಂದರು. ಮುಖ್ಯಮಂತ್ರಿಗಳು ಸಂತೋಷದಿಂದ ಅದಕ್ಕೂ ಅಲ್ಲಿಯೇ ತಥಾಸ್ತು ಎಂದರು!

ಮುಖ್ಯ ಅತಿಥಿಯಾಗಿ ಬಂದ ಮುಖ್ಯಮಂತ್ರಿ ರಾಜ, ತೋಟಗಾರಿಕೆಯ ಮಾಲಕರ ಸಂಘಟನೆಯ ಅಧಿವೇಶನದಲ್ಲಿ ಭಾಷಣ ಮಾಡುತ್ತಾ ಅವರಿಗೆ ಕೆಲವು ಹಿತೋಪದೇಶಗಳನ್ನಿತ್ತರು, ಭರವಸೆಗಳನ್ನಿತ್ತರು. ಅವರು ಅಕ್ರಮವಾಗಿ, ಕಾನೂನು ಬಾಹಿರವಾಗಿ ಭಾರೀ ಭೂಭಾಗವನ್ನು ವಶಪಡಿಸಿಕೊಂಡಿದ್ದರೂ, ಆ ಭೂಮಿಯನ್ನು ಹಸನುಮಾಡಿ ಕಾಫಿ, ಏಲಕ್ಕಿ, ಇತ್ಯಾದಿ ತೋಟಗಾರಿಕೆಯನ್ನು ಮಾಡಿ ಉತ್ಪಾದನೆಯ ಬಹುಭಾಗ ರಫ್ತು ಮಾಡಿ ವಿದೇಶ ವಿನಿಮಯ ಗಳಿಸಿದ ವೀರರೆಂದು ಮುಖ್ಯಮಂತ್ರಿಗಳು ಮುಕ್ತಕಂಠದಿಂದ ತೋಟಗಾರಿಕೆಯ ಮಾಲಕರನ್ನು ಹೊಗಳಿದರು. ಅಕ್ರಮವಾಗಿ, ಕಾನೂನು ಬಾಹಿರವಾಗಿ ವಶಪಡಿಸಿಕೊಂಡಿರುವ ಭೂಮಿಯ ಒಡೆತನ ತೋಟಗಾರಿಕೆಯ ಮಾಲಕರಿಗೇ ಸಿಗುವಂತೆ ಭೂಸುಧಾರಣಾ ಶಾಸನದಲ್ಲಿ ಬದಲಾವಣೆ ಮಾಡುವುದಾಗಿ ಭರವಸೆ ಇತ್ತರು. (ಮೊದಲೇ ತೋಟಗಾರಿಕೆಯ ಭೂಮಿಯು ಭೂಸುಧಾರಣಾ ಶಾಸನದ ಭೂಮಿತಿ ಹಿಡುವಳಿಗೆ ಒಳಗಾಗಿಲ್ಲ. ಈಗ ಅಕ್ರಮವಾಗಿ ವಶಪಡಿಸಿಕೊಂಡ ಭೂಮಿಯೂ ತೋಟಗಾರಿಕೆಯ ಮಾಲಕರ ವಶವಾಗುವುದು!) ಇನ್ನು ಮುಂದೆ ತೋಟಗಾರಿಕೆಗೆ ಭೂಮಿ ಬೇಕಾದರೆ ತನ್ನಲ್ಲಿ ಕೇಳಬೇಕೆಂದೂ, ಅದನ್ನು ಪಡೆಯಲು ತಾನು ಉಪಾಯ ಹೇಳಿಕೊಡುವುದಾಗಿಯೂ ತಿಳಿಸಿದರು. ತೋಟಗಾರಿಕೆಯ ಮಾಲಕರು ರಾಜಕೀಯಕ್ಕೆ ಸೇರಿದರೆ ಅವರ ಸಮಸ್ಯೆಗಳಿಗೆ ಸುಲಭವಾಗಿ ಪರಿಹಾರ ದೊರಕುವುದೆಂದರು. ಮೇಲ್ತೆರಿಗೆ ರದ್ದುಗೊಳಿಸುವ ಹಾಗೂ ಅಕ್ರಮ ಭೂಮಿಯ ಒಡೆತನ ದೊರಕಿಸುವ ತನ್ನ ನಿರ್ಧಾರಗಳು ಪೊಳ್ಳು ಭರವಸೆಗಳಲ್ಲವೆಂದೂ, ಅವು ಆ ಕ್ಷಣದಿಂದಲೇ ಜ್ಯಾರಿಗೆ ಬರುವುವೆಂದೂ ತಿಳಿಸಿದರು!

ಇಷ್ಟೆಲ್ಲಾ ವರದಾನ ಮಾಡಿದ ಮುಖ್ಯಮಂತ್ರಿಯವರು ಏನಾದರೂ ಪ್ರತಿಫಲ ನಿರೀಕ್ಷಿಸದೇ ಇರಲು ಅವರೇನು ಸರ್ವಸ್ವವನ್ನೂ ತ್ಯಜಿಸಿದ ಸಾಧುವೇ?

ರಾಜ್ಯದಲ್ಲಿ ತೋಟಗಾರಿಕೆಯ ಕಾರ್ಮಿಕರ ಬೇಡಿಕೆಗಳೂ ಸೇರಿ ಇತರ ಎಲ್ಲಾ ಕಾರ್ಮಿಕರ ನ್ಯಾಯವಾದ ಬೇಡಿಕೆಗಳು ದೀರ್ಘಕಾಲದಿಂದ ಪರಿಹಾರ ಕಾಣದೆ ಸದ್ಯ ಹೋರಾಟದ ದಾರಿಹಿಡಿಯುವಂತಾಗಿದೆ. ಭೂಸುಧಾರಣಾ ಕಾಯಿದೆ ಜ್ಯಾರಿಗೆ ಬಂದು ಹಲವು ವರ್ಷಗಳು ಉರುಳಿದರೂ, ಭೂಮಿಯ ಒಡೆತನ ಲಕ್ಷಾಂತರ ಒಕ್ಕಲುಗಳಿಗೆ ಇನ್ನೂ ದಕ್ಕಲಿಲ್ಲ. ಲಕ್ಷಾಂತರ ಗ್ರಾಮೀಣ ಕೃಷಿಕಾರ್ಮಿಕರೂ ಬಡರೈತರೂ ಸರಕಾರದ ಪಾಳುಬಿದ್ದ ಭೂಮಿಯನ್ನು ವಸತಿ ಸೌಕರ್ಯಕ್ಕೂ ವ್ಯವಸಾಯಕ್ಕೂ ಹಂಚಿಕೊಡಲು ಬೇಡಿಕಾಡುತ್ತಿದ್ದರೂ ಸರಕಾರ ಗಮನಕೊಡುತ್ತಿಲ್ಲ. ಅನಿವಾರ್ಯವಾಗಿ ಅಗತ್ಯವಿದ್ದಷ್ಟು ಭೂಮಿಯನ್ನು ಈ ಬಡಜನರು ಆಕ್ರಮಿಸಿಕೊಂಡರೆ ಸರಕಾರದ ಪೋಲೀಸರು, ಭೂಮಾಲಕರ ಗೂಂಡಾಗಳು ಕ್ಷಣಾರ್ಧದಲ್ಲಿಯೇ ಅವರನ್ನು ಹೊಡೆದು ಒದ್ದೋಡಿಸುತ್ತಾರೆ. ರಾಜ್ಯಾದ್ಯಂತ ರೈತಕೋಟಿ ತಮ್ಮ ಫಸಲಿಗೆ ಯೋಗ್ಯ ಪ್ರತಿಫಲ ಸಿಗದೆ, ಕರಭಾರದಿಂದ ಮತ್ತು ಋಣಭಾರದಿಂದ ಮುಗ್ಗರಿಸುತ್ತಿದ್ದಾರೆ, ಈಗ ಹೋರಾಟದ ದಾರಿಹಿಡಿದಿದ್ದಾರೆ. ದುಡಿಯುವ ಜನರಿಗೆ, ವಿದ್ಯಾರ್ಥಿ ಯುವಜನರಿಗೆ ರಾಜಕೀಯ ಬೇಡ ಎಂದು ಉಪದೇಶ ಮಾಡಲಾಗುತ್ತಿದೆ.

ಹೀಗಿರುವಾಗಲೂ, ರಾಜ್ಯದ ತೋಟಗಾರಿಕೆಯ ಮಾಲಕರಿಗೆ ತೆರಿಗೆ ರದ್ದತಿಮಾಡಲು ಹಾಗೂ ಅಕ್ರಮವಾಗಿ ವಶಪಡಿಸಿದ ಭೂಮಿಯ ಒಡೆತನ ನೀಡಲು ನಿಂತಲ್ಲೇ ನಿರ್ಧರಿಸಿದ, ಅವರನ್ನು ರಾಜಕೀಯದಲ್ಲಿ ಭಾಗವಹಿಸಲು ಆಹ್ವಾನಿಸಿದ ಮಾನ್ಯ ಮುಖ್ಯಮಂತ್ರಿಯವರು ಮಾಲಕರಿಂದ ಪ್ರತಿಫಲ ನಿರೀಕ್ಷಿಸದೆ ಇದ್ದಾರೆಯೆ? ಆ ವಿಷಯದಲ್ಲಿಯೂ ಅಲ್ಲಿಯೇ ನಿರ್ಧಾರ! ಮಾಲಕರು ತೆರಿಗೆಕೊಡುವ ಬದಲು 'ಮುಖ್ಯಮಂತ್ರಿಯ ಪರಿಹಾರ ನಿಧಿಗೆ' ದಾನ ಕೊಡಲಿ ಎಂದು ಅಪ್ಪಣೆ ಕೊಡಿಸಿದರು! ಇದು ಲಂಚ ಅಲ್ಲ, ದಾನ ಎಂದು ಮಾಲಕರು ಉದಾರವಾದಿ ಮುಖ್ಯಮಂತ್ರಿಯವರ ಸಲಹೆಗೆ ಒಪ್ಪಿರಬೇಕು!

●

ಬ್ರಿಟಿಷ್ ಬಂಡವಾಳ ಮತ್ತು ರಾಜಕುಮಾರ

1980ರ ಡಿಸೆಂಬರ್ ತಿಂಗಳ ಮೊದಲ ಭಾಗದಲ್ಲಿ ಭಾರತಕ್ಕೆ ಬಂದ ಬ್ರಿಟಿಷ್ ರಾಜಕುಮಾರನ ಸಂದರ್ಶನದ ಕುರಿತು ದೇಶಾದ್ಯಂತ ಸುದ್ದಿಯೋ ಸುದ್ದಿ, ಸಂಭ್ರಮವೋ ಸಂಭ್ರಮ! ರಾಜಕುಮಾರನಿಗೆ ಚಲನಚಿತ್ರ ತಾರೆ ಪದ್ಮಿನಿ ಮುತ್ತು ಕೊಟ್ಟಿದ್ದೂ ದೊಡ್ಡ ಸುದ್ದಿ! ಕರ್ನಾಟಕದಲ್ಲಿ ಅವನಿಗೆ ಮೈಸೂರು ಮಾದರಿಯ ಮುಂಡಾಸು ಸುತ್ತಿದ್ದೂ ಸುದ್ದಿ! ಅವನನ್ನು ನೋಡಲು ಹೆಂಗಸರು, ಕಾಲೇಜು ವಿದ್ಯಾರ್ಥಿನಿಯರು ಸಾಲುಗಟ್ಟಿರುವುದಾಗಿ ಸುದ್ದಿ! ಬಂಡವಾಳಶಾಹಿ ಪತ್ರಿಕೆಗಳಲ್ಲಿ ಅವನದೇ ವಾರ್ತೆ, ಅವನದೇ ಛಾಯಾಚಿತ್ರ, ಅವನ ಕುರಿತೇ ವಿಶೇಷ ಸಂಚಿಕೆ! ಬ್ರಿಟಿಷ್-ಭಾರತ ಬಾಂಧವ್ಯದ ಕುರಿತು ಹೊಗಳಿದ್ದೇ ಹೊಗಳಿದ್ದು! ಇಂತಹ ಪ್ರಚಾರಪ್ರಿಯ ಬ್ರಿಟಿಷ ರಾಜಕುಮಾರನ ಸಂದರ್ಶನದ ಒಳ ಉದ್ದೇಶವೇನಿರಬಹುದು? ಅವನ ದೇಶದಲ್ಲಿ ಏನು ನಡೆಯುತ್ತಿದೆ?

ಬ್ರಿಟನ್ ಇಂದು ತೀವ್ರ ಆರ್ಥಿಕ ರಾಜಕೀಯ ದುಃಸ್ಥಿತಿಗೊಳಗಾಗಿದೆ. ಎರಡನೇ ಜಾಗತಿಕ ಯುದ್ಧಾನಂತರ ಬ್ರಿಟನ್ ತನ್ನ ಎಲ್ಲಾ ವಸಾಹತುಗಳನ್ನು ಒಂದೊಂದಾಗಿ ಕಳೆದುಕೊಂಡು ಒಂದು ದುರ್ಬಲ ಬಂಡವಾಳಶಾಹಿ ರಾಷ್ಟ್ರವಾಗಿ ಉಳಿಯಿತು. ಬೃಹತ್ ಸಾಮ್ರಾಜ್ಯ ಹೊಂದಿದ್ದ ಕಾಲದ ರಾಷ್ಟ್ರೀಯ ಉತ್ಪಾದನೆ, ಉದ್ಯೋಗಾವಕಾಶ, ಆರ್ಥಿಕ ಸ್ಥಿರತೆ, ಜನಜೀವನ ಮಟ್ಟ ಉಳಿಸಿಕೊಳ್ಳಲು ಬ್ರಿಟನ್ ದೇಶಕ್ಕೆ ಅಸಾಧ್ಯವಾಗುತ್ತಾ ಬಂತು. ಅಗ್ಗದ ಕೂಲಿ, ಕಚ್ಚಾ ಪದಾರ್ಥಗಳು ಸಿಗದೆ, ಸುಲಭ ಮಾರುಕಟ್ಟೆಗಳು ಸಿಗದೆ, ಬ್ರಿಟಿಷ್ ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯು ಬಿರುಕು ಬಿಡಲಾರಂಭಿಸಿತು. ನಿರುದ್ಯೋಗ, ಹಣದುಬ್ಬರ, ವಿದೇಶಿ ವ್ಯಾಪಾರದಲ್ಲಿ ಕೊರತೆ, ಕಾರ್ಮಿಕ ಅಶಾಂತಿ, ಆರ್ಥಿಕ ಹಿಂಜರಿತ ಇತ್ಯಾದಿ ಸಮಸ್ಯೆಗಳು ಕಡಲಿನ ತೆರೆಯಂತೆ ಒಂದೊಂದಾಗಿ ಭೂತಾಕಾರವಾಗಿ ತಲೆದೋರಿದವು. ಆರ್ಥಿಕ ದುಃಸ್ಥಿತಿಯಿಂದಾಗಿ ರಾಜಕೀಯ ಅಸ್ಥಿರತೆಯೂ ಹೆಚ್ಚಿತು. ಅವಧಿಯ ಮುಂಚಿತವಾಗಿಯೇ ಹಲವು ಬಾರಿ ಚುನಾಯಿತ ಸರಕಾರಗಳು ಅಧಿಕಾರ ಕಳೆದುಕೊಂಡವು. ಮಧ್ಯಕಾಲೀನ ಚುನಾವಣೆಗಳು ನಡೆದವು.

ಬ್ರಿಟಿಷ್ ಸರಕಾರ ತನ್ನ ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯ ದುಃಸ್ಥಿತಿಯ ಭಾರವನ್ನೆಲ್ಲಾ ಕಾರ್ಮಿಕರ ಮೇಲೆ ಜನಸಾಮಾನ್ಯರ ಮೇಲೆ, ಇತರ ದೇಶಗಳಿಂದ ವಲಸೆ ಬಂದವರ ಮೇಲೆ ಹೇರಲು ಕ್ರಮಕೈಗೊಳ್ಳಲಾರಂಭಿಸಿತು. ಮುಷ್ಕರಗಳನ್ನು ನಿಷೇಧಿಸುವುದು, ವೇತನ ಸ್ಥಗಿತಗೊಳಿಸುವುದು ಮತ್ತು ಕಡಿತಗೊಳಿಸುವುದು, ಕರಭಾರ ಹೆಚ್ಚಿಸುವುದು, ಆರೋಗ್ಯ, ಶಿಕ್ಷಣ, ವಸತಿ, ಸಾರಿಗೆ, ಕ್ಷೇಮನಿಧಿ ಮುಂತಾದ ಜನಕಲ್ಯಾಣ ಯೋಜನೆಗಳಿಗೆ ಸಾರ್ವಜನಿಕ ವೆಚ್ಚದಲ್ಲಿ ಕಡಿತಗೊಳಿಸುವುದು, ಆಮದು ವಸ್ತುಗಳ ಮೇಲಿನ ತೆರಿಗೆ ಏರಿಸುವುದು, ಕಾರ್ಮಿಕರನ್ನು ಕೆಲಸದಿಂದ ತೆಗೆದುಹಾಕುವುದು ಇತ್ಯಾದಿ ಜನವಿರೋಧಿ ಕ್ರಮಗಳು ಹೆಚ್ಚಾಗುತ್ತಿವೆ.

ಬ್ರಿಟನಿನ ಐರಿಷ್, ಸ್ಕಾಟಿಷ್, ಇತ್ಯಾದಿ ಉಪರಾಷ್ಟ್ರೀಯ ಜನರನ್ನು ದಮನಿಸಲಾಗುತ್ತಿದೆ. ಈ ಜನರು ಕೇಂದ್ರಸರಕಾರದ ಸರ್ವಾಧಿಕಾರವನ್ನು ಪ್ರತಿಭಟಿಸುತ್ತಿದ್ದಾರೆ, ಹೆಚ್ಚು ಹೆಚ್ಚು ಸ್ವಾಯತ್ತತೆಗಾಗಿ, ಸ್ವಾತಂತ್ರ್ಯಕ್ಕಾಗಿ ಹೋರಾಟದ ಮಾರ್ಗ ಹಿಡಿದಿದ್ದಾರೆ. ಈ ಮಧ್ಯೆ, ಜನರ ಆರ್ಥಿಕ ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರಕೊಡಲು ಅಶಕ್ತವಾದ ದುರವಸ್ಥೆಯಲ್ಲಿ ಜನಾಂಗದ್ವೇಷ ಹೆಚ್ಚುತ್ತಿದೆ. ಫ್ಯಾಸಿಸ್ಟ್ ಶಕ್ತಿಗಳು ಬಲಗೊಳ್ಳುತ್ತಿವೆ. ಪ್ರಜಾಪ್ರಭುತ್ವ ಮತ್ತು ಸ್ವಾತಂತ್ರ್ಯ ಮೌಲ್ಯಗಳನ್ನು ಪ್ರತಿಪಾದಿಸುವುದಾಗಿ ಹೇಳಿಕೊಳ್ಳುತ್ತಿರುವ ಬ್ರಿಟಿಷ್ ಬಂಡವಾಳಶಾಹಿ ಸರಕಾರವು ಜನಾಂಗದ್ವೇಷ ಸಾಧಿಸುತ್ತಿರುವ ದ. ಆಫ್ರಿಕದ ಅಲ್ಪಸಂಖ್ಯಾತ ಬಿಳಿಯರ ಫ್ಯಾಸಿಸ್ಟ್ ಸರಕಾರಕ್ಕೆ ನೆರವು ಕೊಡುತ್ತಿದೆ, ವ್ಯಾಪಾರಸಂಬಂಧವನ್ನಿಟ್ಟುಕೊಂಡಿದೆ ಹಾಗೆಯೇ ಇಸ್ರೇಲ್ ದೇಶದೊಂದಿಗೆ ನೆಂಟತನ ಇಟ್ಟುಕೊಂಡಿದೆ. ತನ್ನ ದೇಶಕ್ಕೆ ಏಷ್ಯಾ ಹಾಗೂ ಆಫ್ರಿಕಾ ದೇಶಗಳ (ತನ್ನ ಹಿಂದಿನ ವಸಾಹತು ದೇಶಗಳ) ಜನರು ವಲಸೆ ಬರುವುದನ್ನು ತಡೆಯಲು ಅಮಾನುಷವಾಗಿ ನಿರ್ಬಂಧಿಸುತ್ತಿದೆ. ವಲಸೆ ಬರುವ ಸ್ತ್ರೀಯರನ್ನು ಗರ್ಭಿಣಿಯರೋ ಎಂಬ ಪರೀಕ್ಷೆಗೊಳಪಡಿಸುತ್ತಿದೆ. ಮಕ್ಕಳ ಪ್ರಾಯವನ್ನು ತಿಳಿಯಲು ಅವರ ಆರೋಗ್ಯಕ್ಕೆ ಅಪಾಯವಾಗುವ ಎಕ್ಸರೇ ತೆಗೆಯಲಾಗುತ್ತಿದೆ. ಈ ವಿಷಯಗಳಲ್ಲಿ ವಿಶ್ವಸಂಸ್ಥೆಯ ಎಲ್ಲಾ ನಿಯಮಗಳನ್ನೂ ಉಲ್ಲಂಘಿಸುತ್ತಿದೆ.

ಬ್ರಿಟಿಷ್ ರಾಜಕುಮಾರ ಭಾರತಕ್ಕೆ ಬರುವ ಕೆಲವೇ ದಿನಗಳ ಮೊದಲು, ನವೆಂಬರ್ 29ರಂದು 1,00,000 ಜನರು ನಿರುದ್ಯೋಗ ಸಮಸ್ಯೆಯ ವಿರುದ್ಧ ಬೃಹತ್ ಮೆರವಣಿಗೆ ನಡೆಸಿದರು. ಬ್ರಿಟನಿನ ಆರ್ಥಿಕ ದುಃಸ್ಥಿತಿಯು 1930ರ ಜಾಗತಿಕ ಆರ್ಥಿಕ ದುಃಸ್ಥಿತಿಯಷ್ಟೇ ಗಂಭೀರವಾಗಿದೆ. ಅಷ್ಟು ಪುಟ್ಟ ದೇಶದಲ್ಲಿ 20,00,000ಕ್ಕೂ ಹೆಚ್ಚು ಜನರು ನಿರುದ್ಯೋಗಸ್ಥರಾಗಿದ್ದಾರೆ! ಶೇ. 20ರ ದರದಲ್ಲಿ ಹಣದುಬ್ಬರವಿದೆ! ನಿರುದ್ಯೋಗದ ವಿರುದ್ಧ ನಡೆದ ಬೃಹತ್ ಮೆರವಣಿಗೆಯು ಕಳೆದ 50 ವರ್ಷಗಳಲ್ಲಿಯೇ ಅತ್ಯಂತ ದೊಡ್ಡದಾಗಿತ್ತು. ಆಳುವ ಕನ್ಸರ್ವೇಟಿವ್ ಪಕ್ಷದಲ್ಲಿ ತೀವ್ರ ಬಿರುಕು ಹುಟ್ಟಿದೆ, ವಿರೋಧ ಪಕ್ಷವಾದ ಲೇಬರ್ ಪಾರ್ಟಿಯ ನಾಯಕತ್ವವು ಉಗ್ರಗಾಮಿ ಎಡಪಂಥೀಯರ ಕೈಸೇರಿದೆ. ಮುಂದಿನ ದಿನಗಳಲ್ಲಿ ಹೋರಾಟ ಹೆಚ್ಚಾಗಲಿದೆ. ಕಾಡ್ಗಿಚ್ಚಿನಂತೆ ಹಬ್ಬಲಿದೆ. ಶ್ರೀಮತಿ ಮಾರ್ಗರೆಟ್ ಥ್ಯಾಚರಳ ಸರಕಾರ ನಡುಗಾಲದಲ್ಲಿಯೇ ಬಿದ್ದುಹೋಗಿ ಮರುಚುನಾವಣೆ ನಡೆಯುವ ಸಂಭವವಿದೆ.

ಇಂತಹ ದುಃಸ್ಥಿತಿ ತನ್ನ ದೇಶದಲ್ಲಿರುವಾಗ ಬ್ರಿಟಿಷ್ ರಾಜಕುಮಾರ ಸಿನೆಮಾ ತಾರೆಯ ಮುತ್ತು ಪಡೆದು ಪ್ರಚಾರ ಗಳಿಸಿ ತಾನು ಭಾರತ ದೇಶದ ರಾಜಕುಮಾರನೆಂದೇ ಮೆರೆದಾಡಿದ! ಧಿಕ್ಕಾರ! ಬ್ರಿಟಿಷ್ ಸಾಮ್ರಾ

(6ನೇ ಪುಟ ನೋಡಿ)

ಎ.ಐ.ಸಿ.ಸಿ. ಅಧಿವೇಶನ

(ಹಿಂದಿನ ಸಂಚಿಕೆಯಿಂದ)

ಎರಡು ಪ್ರಮುಖ ಬೆಳವಣಿಗೆಗಳು

ಆಳುವ ಪಕ್ಷ ಅಧಿಕಾರ ವಹಿಸಿಕೊಂಡ ಮೇಲೆ ಆಗಿರುವ ಎರಡು ಪ್ರಮುಖ ಬೆಳವಣಿಗೆಗಳು, ಅಸ್ಸಾಂ ಚಳುವಳಿಯ ಮುಂದುವರಿಕೆ ಮತ್ತು ಮೊರಾದಾಬಾದ್ ಮೊದಲಾದ ಉತ್ತರ ಭಾರತದಲ್ಲಿ ನಡೆದ ಕೋಮು ದಂಗೆಗಳು. ಅಸ್ಸಾಂ ಚಳುವಳಿ ತೀವ್ರವಾಗಿ ಮುಂದುವರಿಯುತ್ತಿದ್ದು ಪ್ರತ್ಯೇಕತಾವಾದಿ ಮತ್ತು ವಿದೇಶಿ ಸಾಮ್ರಾಜ್ಯಶಾಹಿ ಶಕ್ತಿಗಳು ದೇಶವನ್ನು ವಿಚ್ಛಿದ್ರ ಮಾಡಲು ಪೂರ್ಣ ಪ್ರಯತ್ನಗಳನ್ನು ಮಾಡುತ್ತಿವೆ. ಕೋಮು ದಂಗೆಗಳು ಹಿಂದೆಂದೂ ಆಗದಷ್ಟು ದೊಡ್ಡ ಪ್ರಮಾಣದಲ್ಲಿ ಕಳವಳಕಾರಿಯಾಗಿ ನಡೆದಿವೆ. ಇವೆರಡೂ ಅಪಾಯಕಾರಿ ಬೆಳವಣಿಗೆಗಳು ಆಳುವ ಪಕ್ಷದ ನೀತಿಗಳ, ಕ್ರಮಗಳ ನೇರ ಪರಿಣಾಮ. ಈ ಜವಾಬ್ದಾರಿಯಿಂದ ಅದು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಮೊರಾದಾಬಾದ್ ಘಟನೆಗಳ ಸಂಬಂಧದಲ್ಲಿ ಬಂಧಿತರಾಗಿರುವವರಲ್ಲಿ ಕಾಂಗ್ರೆಸ್(ಐ)ನ ಕಾರ್ಯಕರ್ತರು ಸಹ ಹಲವರು ಇದ್ದಾರೆ ಎಂದು ಕೇಂದ್ರ ಗೃಹಮಂತ್ರಿಗಳು ಒಪ್ಪಿಕೊಂಡಿದ್ದಾರೆ.

ಇದಕ್ಕೆ ಪ್ರತಿಯಾಗಿ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳು ಪ್ರತ್ಯೇಕತಾವಾದದ ವಿರುದ್ಧ ದೇಶದ ಏಕತೆಗಾಗಿ, ಕೋಮುವಾದದ ವಿರುದ್ಧ ಜಾತ್ಯತೀತತೆ ಸಲುವಾಗಿ ಎಡೆಬಿಡದೆ ಹೋರಾಟ ನಡೆಸಿವೆ,

ಏಕೆಂದರೆ ಕೋಮುವಾದ ಮತ್ತು ಪ್ರತ್ಯೇಕತಾವಾದವನ್ನು ಸೋಲಿಸುವುದು, ದುಡಿಯುವ ಜನರ ಸಂಘಟನೆಯ ದೃಷ್ಟಿಯಿಂದ ತೀರಾ ಅಗತ್ಯ. ಹಾಗೆಯೇ ಎಡಪಂಥೀಯ ಸರ್ಕಾರಗಳು ಪ್ರತ್ಯೇಕತಾವಾದಿ ಚಳುವಳಿಗೆ ಆಸ್ಪದ ಕೊಟ್ಟಿಲ್ಲ, ಕೋಮುದಂಗೆಗಳಿಗೆ ಪ್ರೋತ್ಸಾಹ ನೀಡಿಲ್ಲ. ಆದರೂ ಸರಕಾರ ಎಲ್ಲ ವಿರೋಧ ಪಕ್ಷಗಳನ್ನು ಒಟ್ಟುಸೇರಿಸಿ ದೂಷಿಸುತ್ತದೆ. ಈ ಎರಡೂ ಅಪಾಯಗಳ ವಿರುದ್ಧ ಹೋರಾಡುವ ಬಗ್ಗೆ ಗಂಭೀರತೆಯನ್ನಂತೂ ಇದು ಸೂಚಿಸುವುದಿಲ್ಲ.

ದೇಶದ ಆರ್ಥಿಕ ಸ್ಥಿತಿಯಾದರೂ ಏನು? ಹಣದುಬ್ಬರ ಶೇಕಡಾ 20ನ್ನು ಮುಟ್ಟಿದೆ. ಸರ್ಕಾರವೇ ಜೀವನಾವಶ್ಯಕ ವಸ್ತುಗಳ ಬೆಲೆಗಳನ್ನು ಏರಿಸುತ್ತಿದೆ. ನಿರುದ್ಯೋಗಿಗಳ ಸಂಖ್ಯೆ ಸಹ ಏರುತ್ತಿದೆ. ಆರ್ಥಿಕತೆ ಡೋಲಾಯಮಾನವಾಗಿದೆ, ರೈತವರ್ಗ ದಿವಾಳಿಯಾಗುತ್ತಿದೆ, ತಾರತಮ್ಯ ಹೆಚ್ಚುತ್ತಿದೆ. ಒಂದು ಕಡೆ ಗುತ್ತೇದಾರಿ ಬಂಡವಾಳಗರು, ದೊಡ್ಡ ಜಮೀನ್ದಾರರು, ವರ್ತಕರು, ಐಶ್ವರ್ಯ ಕೂಡುಹಾಕುತ್ತಿದ್ದರೆ, ಹೆಚ್ಚು ಹೆಚ್ಚು ಜನ ದಾರಿದ್ರ್ಯರೇಖೆಯ ಕೆಳಗೆ ಹೋಗುತ್ತಿದ್ದಾರೆ,

ಈ ಗಂಭೀರ ಪರಿಸ್ಥಿತಿಯ ಪರಿವೆಯೇ ಎ.ಐ.ಸಿ.ಸಿ.ಗೆ ಇದ್ದಂತಿಲ್ಲ. ಎ.ಐ.ಸಿ.ಸಿ.ಯ ರಾಜಕೀಯ ನಿರ್ಣಯ ಹೀಗೆ ಹೇಳುತ್ತದೆ "ಹಳ್ಳಿಯ ಜನರಲ್ಲಿ ಕಾಂಗ್ರೆಸ್(ಐ) ಪಕ್ಷದ ನೆಲೆ ಭದ್ರವಾಗಿದೆ......ಕಾಂಗ್ರೆಸ್(ಐ) ಪ್ರಜಾಸತ್ತಾತ್ಮಕ ದರ್ಶನವನ್ನು ಬಲಪಡಿಸುವ ಕೆಲಸವನ್ನು ನಿಷ್ಠೆಯಿಂದ ಮುಂದುವರಿಸುತ್ತದೆ ಮತ್ತು ಇದು ಜನಸಾಮಾನ್ಯರ ಜೀವನದಲ್ಲಿ ಪ್ರತಿಫಲಿತವಾಗುವಂತೆ ನೋಡಿಕೊಳ್ಳುತ್ತದೆ......ಕಾಂಗ್ರೆಸ್ ಜಾತ್ಯತೀತತೆಯ ಆಧಾರದ ಮೇಲೆ ದೇಶವನ್ನು ಒಂದುಗೂಡಿಸಿದೆ. ವಿಚ್ಛಿದ್ರಕಾರಕ ಮತ್ತು ವಿರಸ ಹಟ್ಟಿಸುವ ಶಕ್ತಿಗಳನ್ನು ಪ್ರತ್ಯೇಕಿಸಿ, ಬಯಲುಮಾಡುವ ಎಲ್ಲಾ ಪ್ರಯತ್ನಗಳನ್ನು ಮಾಡುತ್ತದೆ"

ಆರ್ಥಿಕ ಪರಿಸ್ಥಿತಿಯ ಬಗೆಗಿನ ನಿರ್ಣಯದಲ್ಲಿ ನಿರಾತಂಕ ಭಾವನೆ ಇದೆ. 1977ರ ಮೊದಲು ಆರ್ಥಿಕತೆ ಸ್ಥಿರವಾದ ಮುನ್ನಡೆ ಸಾಧಿಸಿತ್ತು. 1977-79ರ ಅವಧಿಯಲ್ಲಿ ಹಿಂಜರಿತ ಶುರುವಾಯಿತು. ಆದರೆ ಜನವರಿ 1980ರಲ್ಲಿ "ಭಾರತದ ಎಲ್ಲಾ ಜನರ ಆಶೆ ಆಕಾಂಕ್ಷೆಗಳನ್ನು ಪ್ರತಿಬಿಂಬಿಸುವ" "ನಿಷ್ಠ ನಾಯಕಿ" ಅಧಿಕಾರಕ್ಕೆ ಬಂದಾಗಿನಿಂದ ಎಲ್ಲವೂ ಸರಿಹೋಗಿದೆ. ಇನ್ನು ಆರ್ಥಿಕ ವಾತಾವರಣ ಉತ್ತಮಗೊಳ್ಳುತ್ತಿದೆ. ಬೆಲೆಗಳು ಇಳಿಯಲಾರಂಭಿಸುತ್ತವೆ, ಕಾರ್ಮಿಕರಿಗೆ ಕೊಟ್ಟ ಭರವಸೆಯನ್ನು ಪೂರೈಸಲಾಗುತ್ತದೆ, ರೈತರ ಹಿತಾಸಕ್ತಿಗಳನ್ನು ರಕ್ಷಿಸಲಾಗುತ್ತದೆ, ಮತ್ತು ಎ.ಐ.ಸಿ.ಸಿ. "ದೇಶವನ್ನು ಅದರ ಗುರಿಯಾದ ಶೋಷಣೆ, ಹಸಿವು, ಅಸಮಾನತೆ, ಅನ್ಯಾಯಗಳಿಲ್ಲದ ವ್ಯವಸ್ಥೆಯತ್ತ ನಡೆಸುತ್ತಾ ಎಲ್ಲಾ ಬಿಕ್ಕಟ್ಟುಗಳನ್ನು ಪರಿಹರಿಸುವ ಆತ್ಮವಿಶ್ವಾಸ ಇದೆ".

"ಪ್ರಜಾಸತ್ತಾತ್ಮಕ ದರ್ಶನ"

ಈಶಾನ್ಯ ಪ್ರದೇಶದಲ್ಲಿ ಅಶಾಂತಿ ಮತ್ತು ಕೋಮು ದಂಗೆಗಳಲ್ಲದೆ, ಬಾಗ್‌ಪತ್‌ನಿಂದ ಭಾಗಲ್ಪುರದವರೆಗೆ ಪೋಲೀಸು ಅತ್ಯಾಚಾರಗಳ ಮುಗಿಯದ ಕತೆ ಕೇಳಿಬರುತ್ತಿದೆ. ಆಳುವ ವರ್ಗಗಳು ಜನರ ಮೇಲೆ ದಬ್ಬಾಳಿಕೆ ನಡೆಸಲು ಪೋಲೀಸರನ್ನು ಕ್ರೂರವಾಗಿಸಿ ಇಡುತ್ತದೆ. ಇದರ ಫಲವೇ ಅಸಹಾಯಕ ಕೈದಿಗಳನ್ನು ಅಂಧರನ್ನಾಗಿಸಿದ ದಾರುಣ ಘಟನೆ. ಮಹಿಳೆಯರು, ಹರಿಜನರು ಮತ್ತು ಅಲ್ಪಸಂಖ್ಯಾತ ಜನರು ಅತ್ಯಾಚಾರಗಳಿಗೆ ಬಲಿಯಾಗುತ್ತಿದ್ದಾರೆ

ಕೇಂದ್ರಸರ್ಕಾರವೇ ಕಳೆದ 11ತಿಂಗಳಲ್ಲಿ ಹೆಚ್ಚುಹೆಚ್ಚು ದಮನಕಾರಿ ಶಕ್ತಿಗಳನ್ನು ಒಗ್ಗೂಡಿಸುತ್ತಿದೆ. ರಾಷ್ಟ್ರೀಯ ಸುಭದ್ರತಾ ಶಾಸನ ಎಂಬ ಹೆಸರಿನಲ್ಲಿ ಕುಖ್ಯಾತ ಮೀಸಾವನ್ನು ಪುನಃ ತರಲಾಗುತ್ತಿದೆ. ಅಗತ್ಯ ವಸ್ತುಗಳ ಪೂರೈಕೆ ಕಾಯಿದೆಯನ್ನು ಕಾರ್ಮಿಕರ ಆಂದೋಲನಗಳನ್ನು ಕಾನೂನುಬಾಹಿರ ಮಾಡಲು ಸ್ವಚ್ಛಂದವಾಗಿ ಉಪಯೋಗಿಸಲಾಗುತ್ತಿದೆ.

ನ್ಯಾಯಾಂಗದ ಅಧಿಕಾರಗಳನ್ನು ಮೊಟಕುಗೊಳಿಸಲು ಪ್ರಯತ್ನಿಸಲಾಗುತ್ತಿದೆ. ನ್ಯಾಯಾಧೀಶರ ನೇಮಕ ಮತ್ತು ವರ್ಗಾವಣೆಯ ವಿಷಯದಲ್ಲಿ ಮುಖ್ಯ ನ್ಯಾಯಾಧೀಶರ ಅಧಿಕಾರಗಳನ್ನೂ ಮೊಟಕುಗೊಳಿಸಲಾಗುತ್ತಿದೆ. ಸುಪ್ರೀಂ ಮತ್ತು ಹೈಕೋರ್ಟುಗಳನ್ನು 'ಬದ್ಧ' (comitted) ನ್ಯಾಯಾಧೀಶರಿಂದ ತುಂಬಿಬಿಡಲು ಹೊಂಚು ಹಾಕುತ್ತಿದೆ. ಸರ್ಕಾರಿ ಅಧಿಕಾರಿಗಳನ್ನು ಸಹ ವರ್ಗಾವಣೆ ಮತ್ತು ವಜಾದ ದಂಡಬಲದಿಂದ ಬಗ್ಗಿಸಲಾಗುತ್ತಿದೆ.

ಇದಕ್ಕೆಲ್ಲಾ ಶಿಖರಪ್ರಾಯವಾಗಿ, ಪಾರ್ಲಿಮೆಂಟರಿ ಪದ್ಧತಿ ಸರ್ಕಾರವನ್ನೇ ಬದಲಾಯಿಸಲು ಪ್ರಯತ್ನ ನಡೆದಿದೆ. ಎ.ಐ.ಸಿ.ಸಿ. ತನ್ನ ನಿರ್ಣಯದಲ್ಲಿ ಹೇಳಿರುವ 'ಪ್ರಜಾಸತ್ತಾತ್ಮಕ ದರ್ಶನ'—ದೇಶವನ್ನು ದೊಡ್ಡ ಯಾತನಾ ಶಿಬಿರವನ್ನಾಗಿಸುವುದು. ತುರ್ತು ಪರಿಸ್ಥಿತಿಯ ಸಮಯದಲ್ಲಿ ಈ ದರ್ಶನ ಜಾರಿಗೆ ಬಂದಿತ್ತು.

ಆದ್ದರಿಂದಲೇ ಅಧಿವೇಶನದಲ್ಲಿಯೇ ಅಧ್ಯಕ್ಷೀಯ ಸರ್ಕಾರಿ ಪದ್ಧತಿಗೆ ಬದಲಾಯಿಸುವ ಮತ್ತು ದೇಶದಲ್ಲಿ ಪುನಃ ತುರ್ತುಪರಿಸ್ಥಿತಿ ಘೋಷಿಸುವ ಬಗ್ಗೆ ತೀವ್ರ ಒತ್ತಾಯ ಕೇಳಿಬಂದಿತು ಎಂದರೆ ಆಶ್ಚರ್ಯವೇನಿಲ್ಲ.

ದೇಶದ ಪರಿಸ್ಥಿತಿಯ ಬಗೆಗಿರುವ ಎರಡೂ ನಿರ್ಣಯಗಳು ಸಹ, ಜನರ ಸಮಸ್ಯೆಗಳ ಯಾವುದೇ ಮೂರ್ತರೂಪದ ಪರಿಹಾರವನ್ನೇನೂ ಒದಗಿಸುವುದಿಲ್ಲ. ಏಕೆಂದರೆ ಈ ಬಗ್ಗೆ ಸರ್ಕಾರಕ್ಕೆ ಯಾವುದೇ ನಿಲುವು, ನೀತಿ ಏನೂ ಇಲ್ಲ. ಬಳಕೆದಾರರನ್ನು ಸುಲಿಯುವಂತೆ ಬೆಲೆಗಳು ಏರುತ್ತಿವೆ, ಆದರೆ ರೈತರು ಸಾಕಷ್ಟು ಬೆಲೆಸಿಗದೆ ಕಂಗಾಲಾಗಿದ್ದಾರೆ. ಆದರೆ ಇದರ ಬಗ್ಗೆ ನಿರ್ಣಯ ಹೇಳುವುದು ಚರ್ವಿತ ಚರ್ವಣ.

ಈ ಎಲ್ಲಾ ವೈಫಲ್ಯಗಳನ್ನು ಮುಚ್ಚಿಕೊಳ್ಳಲು ವಿರೋಧಪಕ್ಷಗಳನ್ನು ಅದರಲ್ಲೂ ಎಡಪಂಥೀಯ ಸರ್ಕಾರಗಳನ್ನು ದೂಷಿಸಲಾಗುತ್ತಿದೆ.

ಎಡ ಸರ್ಕಾರಗಳ ಮೇಲೆ ಆಕ್ರಮಣ

ಅಧಿವೇಶನದಲ್ಲಿ ಎಡ ಸರ್ಕಾರಗಳನ್ನು ವಿಸರ್ಜಿಸಲು ಹಲವು ಒತ್ತಾಯಪೂರ್ವಕ ಬೇಡಿಕೆಗಳು ಬಂದವು. ಈ ರಾಜ್ಯಗಳಲ್ಲಿ ಕಾನೂನು ವ್ಯವಸ್ಥೆಯ ಸ್ಥಿತಿಯ ಬಗ್ಗೆ ಪ್ರಸ್ತಾಪಿಸಲಾಯಿತು. ಆದರೆ ಈ ರಾಜ್ಯಗಳಲ್ಲಿ ಕಾಂಗ್ರೆಸ್ (ಐ) ಆಡಳಿತದ ರಾಜ್ಯಗಳಿಗಿಂತ ಹೆಚ್ಚಿನ ಸಮಸ್ಯೆ ಏನೂ ಇಲ್ಲ.

ಪಶ್ಚಿಮ ಬಂಗಾಲ ಬಂದ್‌ನ ವಿಷಯ ಸಹ ಪ್ರಸ್ತಾಪಿಸಲಾಯಿತು. ಆ ರಾಜ್ಯದ ಜನರಿಗೆ ತಮ್ಮ ಜೀವನಕ್ಕೆ ತೀವ್ರ ಧಕ್ಕೆಯುಂಟುಮಾಡುವ ಕೇಂದ್ರಸರ್ಕಾರದ ಧೋರಣೆಗಳ ವಿರುದ್ಧ ಹೋರಾಡುವ ಹಕ್ಕು ಇಲ್ಲವೆಂದು ಅವರ ಭಾವನೆಯಿದ್ದಂತಿತ್ತು.

ಈ ಮೂರು ರಾಜ್ಯಗಳ ಜನತೆ ತಮ್ಮ ಹಿತಾಸಕ್ತಿಗಳನ್ನು ರಕ್ಷಿಸಲೆಂದೇ ಎಡಪಂಥೀಯ ಒಲವಿನ ಸರಕಾರಗಳನ್ನು ಆರಿಸಿದ್ದುದು; ಕೇಂದ್ರಸರ್ಕಾರದ ಜನವಿರೋಧಿ ಧೋರಣೆಗಳನ್ನು ಕಾರ್ಯರೂಪಕ್ಕೆ ತರುವ ಸಾಧನಗಳಾಗಲಿ ಎಂದು ಅಲ್ಲ. ಪಟ್ಟಭದ್ರ ಹಿತಾಸಕ್ತಿಗಳ ರಕ್ಷಣೆಗಾಗಿ ತನ್ನನ್ನು ಸಮರ್ಪಿಸಿಕೊಂಡಿರುವ ಕಾಂಗ್ರೆಸ್(ಐ)ಗೆ ಈ ಮೂರು ಸರಕಾರಗಳ ಜನಪರ ಧೋರಣೆಗಳೊಂದಿಗೆ ಸ್ಪರ್ಧಿಸಲು ಸಾಧ್ಯವಿಲ್ಲ. ಆದ್ದರಿಂದ ಈ ಸರಕಾರಗಳನ್ನು ಕಿತ್ತುಹಾಕಬೇಕೆಂದು ಅದು ಬಯಸುತ್ತದೆ,

ಪಶ್ಚಿಮ ಬಂಗಾಳದ ಕಾಂಗ್ರೆಸ್(ಐ) ನಾಯಕರೊಂದಿಗೆ ನಡೆದ ಪ್ರತ್ಯೇಕ ಮಾತುಕತೆಯಲ್ಲಿ ಅವರು ಪಶ್ಚಿಮ ಬಂಗಾಳದಲ್ಲಿ ಕೇಂದ್ರ ಮಧ್ಯಪ್ರವೇಶಿಸಬೇಕೆಂದು ಕೇಳಿದಾಗ ಶ್ರೀಮತಿ ಗಾಂಧಿಯವರು ರಾಜ್ಯದಲ್ಲಿ ಒಂದು ಚಳುವಳಿಯನ್ನು ಬೆಳೆಸಬೇಕೆಂದು ಸಲಹೆ ಮಾಡಿದರಂತೆ. ಯಾವ ರೀತಿಯ ಚಳುವಳಿ? 1959ರಲ್ಲಿ ಕೇರಳದಲ್ಲಿ ನಡೆದ ಕಾನೂನುಬಾಹಿರ, ಹಿಂಸಾತ್ಮಕ "ವಿಮೋಚನೆ ಸಮರ" ಮಾದರಿಯ ಚಳುವಳಿಯೇ? ಆ ಮೂಲಕ ಕೇಂದ್ರಸರ್ಕಾರ ಮಧ್ಯಪ್ರವೇಶಿಸಿ ರಾಜ್ಯಸರಕಾರವನ್ನು ವಿಸರ್ಜಿಸಲು ಅವಕಾಶ ಪಡೆಯುವ ಚಳವಳಿಯೇ?

ಸರಕಾರದ ಪ್ರತಿಯೊಂದು ವೈಫಲ್ಯಕ್ಕೂ ವಿರೋಧ ಪಕ್ಷಗಳನ್ನು ದೂಷಿಸಲಾಗುತ್ತಿದೆ. ಅದು ಅಸ್ಸಾಂ ಚಳುವಳಿಯಾಗಿರಲಿ, ಜಾತಿ, ಕೋಮು ಘಟನೆಗಳಾಗಲೀ ಅಥವಾ ಯೋಗ್ಯ ಬೆಲೆಕೊಡಬೇಕೆಂಬ ರೈತರ ಚಳುವಳಿಯಾಗಲಿ.

ಅಸ್ಸಾಂ ಚಳುವಳಿ ಬಗ್ಗೆ ರಾಜಕೀಯ ನಿರ್ಣಯದಲ್ಲಿ ಕೆಲವು ಪಕ್ಷಗಳ ನಿಲುವು ಸಹಾಯಕವಾಗಿದೆ ಎಂದರೂ ಸರಕಾರದ ವೈಫಲ್ಯದ ವಿಚಾರ ಬಂದಾಗ ಬಲಿಪಶುಗಳನ್ನಾಗಿ ಮಾಡಲು ಎಲ್ಲಾ ವಿರೋಧ ಪಕ್ಷಗಳನ್ನು ಸಾರಾಸಗಟಾಗಿ ಸಮೀಕರಿಸಲಾಗುತ್ತಿದೆ. ಆಳುವ ಪಕ್ಷದ ದೃಷ್ಟಿಯಲ್ಲಿ ಹಿಂದೂ ಮತ್ತು ಮುಸ್ಲಿಂ ಕೋಮುವಾದಿಗಳು ಹಾಗೂ ಸತತವಾಗಿ ಕೋಮು ಭಾವನಾ ವಿರೋಧೀ ಎಡ ಹಾಗೂ ಪ್ರಜಾಸತ್ತಾತ್ಮಕ ಶಕ್ತಿಗಳು ಇವುಗಳ ನಡುವೆ ಏನೂ ವ್ಯತ್ಯಾಸವೇ ಇಲ್ಲ. ವಿರೋಧ ಪಕ್ಷಗಳಿಂದ ಸಹಕಾರಕೋರುವ ಶ್ರೀಮತಿ ಗಾಂಧಿಯವರು ಅವುಗಳಿಗೆ ಕೊಡುವ ಗೌರವ ಇದೇ ಏನು? ಅಥವಾ ಸಂಕುಚಿತ ಪಕ್ಷಪಾತ ಪೂರ್ಣ ರಾಜಕೀಯವೋ?

ರೈತರ ಸತ್ಯಾಗ್ರಹವನ್ನು ರಾಜಕೀಯ ಉದ್ದೇಶಗಳಿಂದ ಕೂಡಿದ್ದು ಎಂದು ಬಣ್ಣಿಸಲಾಗಿದೆ. ಆದರೆ ರೈತವರ್ಗ ಆಳುವ ಪಕ್ಷದೊಂದಿಗೆ ದೃಢವಾಗಿ ಇದೆ ಹಾಗೂ ಸರಕಾರದ ರೈತರ ಪರವಾದ ಧೋರಣೆಗಳಿಂದ ಸಂತೃಪ್ತವಾಗಿದೆ ಎಂದು ಎ.ಐ.ಸಿ.ಸಿ.(ಐ) ಹೇಳುತ್ತದೆ. ಆದರೆ ಕಾಂಗ್ರೆಸ್(ಐ) ಕೂಡಾ ಸೇರಿದಂತೆ ಎಲ್ಲಾ ರಾಜಕೀಯ ಪಕ್ಷಗಳಿಗೆ ಸೇರಿದ ರೈತರಿಗೆ ತಮ್ಮ ಬೆಳೆಗಳಿಗೆ ಯೋಗ್ಯಬೆಲೆ ಪಡೆಯಬೇಕೆಂಬುದು ಒಂದು ಜೀವನ್ಮರಣದ ಪ್ರಶ್ನೆ, ಆದ್ದರಿಂದ ಅವರೆಲ್ಲಾ ರೈತಚಳುವಳಿಯಲ್ಲಿ ಪಾಲುಗೊಂಡಿದ್ದಾರೆ ಎಂಬ ವಾಸ್ತವಾಂಶದ ಬಗ್ಗೆ ಯಾಕೆ ಕಾಂಗ್ರೆಸ್(ಐ)ನವರು ಕುರುಡರಾಗಿದ್ದಾರೆ? ಇದು ತಮ್ಮ ಗುತ್ತೇದಾರಿ ಬಂಡವಾಳಶಾಹೀ ಹಾಗೂ ಭೂಮಾಲೀಕ ಪರ ಧೋರಣೆಗಳ ಫಲ ಎಂದು ಒಪ್ಪಲು ಅವರು ತಯಾರಿಲ್ಲ. ಆದರೆ ಅವರ ಹಿಂಬಾಲಕರೂ ಸೇರಿದಂತೆ ಎಲ್ಲಾ ರೈತರೂ ಸತ್ಯಸಂಗತಿಯನ್ನು ಅರಿತು ಹೋರಾಟಕ್ಕಿಳಿಯುವುದನ್ನು ತಪ್ಪಿಸಲು ಅವರಿಂದ ಸಾಧ್ಯವಿಲ್ಲ. ವಿರೋಧಪಕ್ಷಗಳ ವಿರುದ್ಧ ವಿಷಪೂರಿತ ದೂಷಣೆಗಳ ಸುರಿಮಳೆಗರೆದರೂ ರೈತರ ಹೋರಾಟವನ್ನು ತಡೆಯುವುದು ಅವರಿಂದ ಸಾಧ್ಯವಿಲ್ಲ.

ವಿರೋಧ ಪಕ್ಷಗಳ ಮೇಲೆ ಏಕಪ್ರಕಾರದ ಧಾಳಿ, ಎಡ ಒಲವಿನ ಸರಕಾರಗಳ ವಿಸರ್ಜನೆ, ಅಧ್ಯಕ್ಷೀಯ ಮಾದರಿ ಸರ್ಕಾರ ವ್ಯವಸ್ಥೆಗಾಗಿ ಕರೆ (ಆರ್ಥಿಕ ನಿರ್ಣಯವನ್ನು ಮಂಡಿಸುವಾಗ ತನ್ನ ಭಾಷಣದುದ್ದಕ್ಕೂ ಅಂತುಲೆಯವರು ಕೇವಲ ಇದರ ಬಗ್ಗೆಯೇ ಮಾತನಾಡಿದರು) ಇವೆಲ್ಲಾ ಆಳುವ ಪಕ್ಷ ಯಾವ ದಾರಿ ಹಿಡಿಯಲು ನಿರ್ಧರಿಸಿದೆಯೆಂಬುದನ್ನು ಸೂಚಿಸುತ್ತವೆ.

ಈ ಎಲ್ಲಾ ಕ್ರಮಗಳು ದೇಶದ ಫೆಡರಲ್(ಸಂಯುಕ್ತ ರಾಷ್ಟ್ರ) ಸ್ವರೂಪದ ಬುಡವನ್ನೇ ಕತ್ತರಿಸಿ ಏಕಾಂಗದ ಪ್ರಭುತ್ವ (Unitary State)ವಾಗಿ ಪರಿವರ್ತಿಸುತ್ತವೆ. ಇವು ದೇಶದ ಐಕ್ಯತೆಗೆ ಸಹಾಯ ಮಾಡುವುದಿಲ್ಲ. ಬದಲಾಗಿ ಅವು ದೇಶವನ್ನು ಭಿನ್ನಭಿನ್ನಗೊಳಿಸುತ್ತವೆ. ಅವು ಪ್ರಜಾಪ್ರಭುತ್ವವನ್ನು ಬಲಗೊಳಿಸುವುದಿಲ್ಲ;

(6ನೇ ಪುಟ ನೋಡಿ)

ಊಳಿಗಮಾನ್ಯ ಅವಶೇಷಗಳನ್ನು ನಾಶಮಾಡಬೇಕಾದ ಅಗತ್ಯ

ಚೀನದ ಸದ್ಯದ ನಾಯಕತ್ವವು ಪಕ್ಷವು ಅನುಸರಿಸುತ್ತಿದ್ದ ತೀವ್ರ ಎಡದಾರಿಯನ್ನು ಗುರುತಿಸಿ ಅದನ್ನು ಹೋಗಲಾಡಿಸಲು ಪ್ರಯತ್ನಿಸುತ್ತಿದೆ. ನಾಲ್ವರ ಕೂಟದ ವಿಚಾರಣೆಯು ಕಣ್ಣು ತೆರೆಸುವ ಘಟನೆಯಾಗಿದೆ. ಈ ಹಿನ್ನೆಲೆಯಲ್ಲಿ ಚೀನದ "ರೆನ್ ಮಿನ್ ರಿಬಾವ್"ನಲ್ಲಿ ಊಳಿಗಮಾನ್ಯತೆಯ ಪ್ರಭಾವವನ್ನು ಅಳಿಸಿಹಾಕುವುದರ ಬಗ್ಗೆ ರೂನ್ ಮಿಂಗ್ ಅವರು ಬರೆದಿರುವ ಲೇಖನದ ಸಂಗ್ರಹಾನುವಾದ ಇಲ್ಲಿದೆ.

1949ರಲ್ಲಿ ಪ್ರಜಾಪ್ರಭುತ್ವವಾದಿ ಕ್ರಾಂತಿಯಲ್ಲಿ ಜಯಗಳಿಸಿದ ನಂತರ ಚೀನದ ಜನತೆ ಹಾದುಬಂದ ಕಷ್ಟಕರವಾದ ಹಾದಿಯು ಒಂದನ್ನಂತೂ ನಿಖರವಾಗಿ ಸೂಚಿಸುತ್ತದೆ: ಊಳಿಗಮಾನ್ಯತೆಯಿಂದ ಮೇಲೆದ್ದಿರುವ ಆರ್ಥಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಹಿಂದುಳಿದಿರುವ, ಅರೆ ವಸಾಹತುಶಾಹಿ, ಅರೆ ಊಳಿಗಮಾನ್ಯ ದೊಡ್ಡ ದೇಶವೊಂದರಲ್ಲಿ ಊಳಿಗಮಾನ್ಯತೆಯ ಅವಶೇಷಗಳನ್ನು ತೀವ್ರವಾಗಿ ಎದುರಿಸಿ ನಾಶಮಾಡಬೇಕು. ಇದನ್ನು ಊಳಿಗಮಾನ್ಯ ಶೋಷಣಾ ವ್ಯವಸ್ಥೆಯನ್ನು ಕಿತ್ತೊಗೆದ ಕೂಡಲೇ ಮಾಡಬೇಕು. ಊಳಿಗಮಾನ್ಯ ಅಧಿಕಾರಶಾಹಿ ಸರ್ವಾಧಿಕಾರದ ಅವಶೇಷಗಳ ಬಗ್ಗೆ ವಿಶೇಷ ಗಮನ ಕೊಡಬೇಕು.

ಈ ಊಳಿಗಮಾನ್ಯ ಅವಶೇಷಗಳು ಜನತೆಯ ರಾಜಕೀಯ ಅಧಿಕಾರದ

ಆದರೆ ಚೀನದಲ್ಲಿ ರಾಜನಶಕ್ತಿಯೇ ದೊಡ್ಡದಾಗಿದ್ದರಿಂದ ಅಧಿಕಾರಶಾಹಿಯು ಧರ್ಮಕ್ಕಿಂತ ದೊಡ್ಡದಾಯಿತು. ದೇವರ ಅವತಾರವಾದ ಚಕ್ರವರ್ತಿಯೇ ದೇವರಿಗಿಂತ ಶಕ್ತಿವಂತನಾದ.

ವಿಶ್ವದ ಬೂರ್ಜ್ವಾ ಕ್ರಾಂತಿಗಳಿಂದ ಒಂದಿಷ್ಟೂ ಅಲುಗದ ಹಾಗೆ ಚೀನದ ಈ ಪದ್ಧತಿಗಳು ನಿಂತಿದ್ದವು. ಅಲ್ಲದೆ ಆಧುನಿಕ ಚೀನದಲ್ಲಿ ಅರೆಊಳಿಗಮಾನ್ಯ, ಅರೆವಸಾಹತುಶಾಹಿಯೂ ಬೆಳೆಯಿತು. ಯೂರೋಪಿನಲ್ಲಿ ಚರ್ಚು ಮತ್ತು ರಾಜತ್ವದ ವಿರುದ್ಧ ಬೂರ್ಜ್ವಾ ವರ್ಗವು ದೀರ್ಘವಾದ ಸೈದ್ಧಾಂತಿಕ ಹೋರಾಟವನ್ನು ನಡೆಸಿತು. ಆದರೆ ಚೀನದಲ್ಲಿ ದುರ್ಬಲವಾಗಿದ್ದ ಬೂರ್ಜ್ವಾವರ್ಗವು ಊಳಿಗಮಾನ್ಯ ಆಲೋಚನೆಯನ್ನು ಬದಲಾಯಿಸಲು ಶಕ್ತವಾಗಲಿಲ್ಲ.

ಮಾನ್ಯ ವಿರೋಧಿ ಪ್ರಜಾಪ್ರಭುತ್ವವಾದಿ ಕ್ರಾಂತಿಯನ್ನು ಮುನ್ನಡೆಸಲು ಇನ್ನಾವ ಸಾಮಾಜಿಕ ಶಕ್ತಿಯೂ ಇರಲಿಲ್ಲ. ಆದ್ದರಿಂದ ಚೀನದ ಊಳಿಗಮಾನ್ಯ, ಸರ್ವಾಧಿಕಾರಿ ರಾಜಕೀಯ ಸಂಸ್ಥೆಗಳನ್ನು ಮತ್ತು ಸಿದ್ಧಾಂತವನ್ನು ತೊಡೆದುಹಾಕುವ ಚಾರಿತ್ರಿಕ ಕರ್ತವ್ಯವು ಕಾರ್ಮಿಕವರ್ಗದ ಹೆಗಲಮೇಲೆ ಬಿತ್ತು.

ಚೀನದ ಕಾರ್ಮಿಕವರ್ಗವು 1919ರಲ್ಲಿ ಮೇ 4ರ ಚಳುವಳಿಯನ್ನು ನಡೆಸಿತು. ಇದು ಹೊಸ ಯುಗವನ್ನೇ ಆರಂಭಿಸಿತು. ವಿಜ್ಞಾನ ಮತ್ತು ಪ್ರಜಾಪ್ರಭುತ್ವಗಳು ಈ ಚಳುವಳಿಯಿಂದ ಮುಂದೆ ಬಂದವು. ಸಾವಿರಾರು ವರ್ಷಗಳಿಂದ ಊಳಿಗಮಾನ್ಯ, ಸರ್ವಾಧಿಕಾರದಲ್ಲಿ ನೊಂದ ಜನರನ್ನು ಈ ಚಳುವಳಿ ಹುರುಪುಗೊಳಿಸಿತು. ಆದರೆ ಇದು ಒಂದು ಆರಂಭವಷ್ಟೆ.

ಊಳಿಗಮಾನ್ಯ ಅವಶೇಷಗಳು

1949ರಲ್ಲಿ ಜನತೆಯ ಪ್ರಜಾಪ್ರಭುತ್ವವಾದಿ ಕ್ರಾಂತಿಗೆ ಆದ ಜಯ ಮತ್ತು ಭೂಸುಧಾರಣೆಗಳು ವಿಲಿಯ ಗಟ್ಟಲೆ ವರ್ಷಗಳಷ್ಟು ಹಳೆಯದಾದ ಊಳಿಗಮಾನ್ಯ ಪದ್ಧತಿಯನ್ನು ನಾಶಮಾಡಿದವು. ಆದರೆ, ಚೀನದಲ್ಲಿ ಊಳಿಗಮಾನ್ಯ ಶೋಷಣಾವ್ಯವಸ್ಥೆಯನ್ನು ನಾಶಮಾಡಿದ ಕೂಡಲೇ ಊಳಿಗಮಾನ್ಯ ಪ್ರಭಾವವೂ ಹೊರಟುಹೋಗಿದೆ ಎಂಬ ತಪ್ಪುಗ್ರಹಿಕೆ ಕೆಲವು ಕಾಲ ಇದ್ದುದರಿಂದ ಸಮಾಜದಲ್ಲಿದ್ದ, ಅದರಲ್ಲೂ ದೇಶದ ರಾಜಕೀಯ ಜೀವನದಲ್ಲಿ ಮತ್ತು ಅಂತರ-ಪಕ್ಷ ಜೀವನದಲ್ಲಿ ಉಳಿದಿದ್ದ ಊಳಿಗಮಾನ್ಯ ಪ್ರಭಾವಗಳನ್ನು ನಿರ್ಲಕ್ಷಿಸಲಾಯಿತು. 1956ರಲ್ಲಿ ಉತ್ಪಾದನಾ ಮೂಲಗಳ ಒಡೆತನದ ಬದಲಾವಣೆ ಸಂಪೂರ್ಣಗೊಂಡ ನಂತರ ಬೂರ್ಜ್ವಾ ಸಿದ್ಧಾಂತವನ್ನು ನಿರ್ಮೂಲನಗೊಳಿಸಬೇಕು ಎಂದುಕೊಳ್ಳಲಾಯಿತೇ ವಿನಹ ಊಳಿಗಮಾನ್ಯ ಅವಶೇಷಗಳನ್ನಲ್ಲ.

ಚೀನದ ಇತಿಹಾಸದಲ್ಲಿ ಲೆನಿನ್ ಹೇಳಿರುವ "ಏಷ್ಯಾ ಪರಿಸ್ಥಿತಿಗಳು" ಇದ್ದು, ಲೆನಿನ್ ಕಾಲದ ರಷ್ಯಕ್ಕಿಂತ ತೀರ ಹಿಂದುಳಿದ ದೇಶವಾಗಿತ್ತು. ನೈಸರ್ಗಿಕ ಆರ್ಥಿಕತೆಯುಳ್ಳ ದೂರದ ಹಳ್ಳಿಗಳಲ್ಲೂ ಬಂಡವಾಳಶಾಹಿ ವಿರೋಧವನ್ನೇ ವರ್ಗಹೋರಾಟವ

ನಿಧಿಗಳು, ತಾಂತ್ರಿಕತೆ ಮತ್ತು ಉಪಕರಣ ಎನ್ನುವುದೇನೋ ಸರಿ-ಆದರೆ ಜನತೆಯಲ್ಲಿ ಹುದುಗಿರುವ ನಿಧಿಯಾದ ಪ್ರತಿಭೆ ಮತ್ತು ಬುದ್ಧಿವಂತಿಕೆಗಳನ್ನು ಹೊರತೆಗೆಯುವುದು ತುಂಬ ಅಗತ್ಯವಾಗಿದೆ. ಉತ್ಪಾದನಾ ಶಕ್ತಿಗಳ ವಿಮೋಚನೆ ಆಗಬೇಕಾಗಿದೆ.

ರಾಜಕೀಯ ಅಧಿಕಾರವನ್ನು ಜನತೆ ಗಳಿಸಿಕೊಳ್ಳುವುದು ಮತ್ತು ಉತ್ಪಾದನಾ ಸಾಧನಗಳ ಸಾರ್ವತ್ರಿಕ ಒಡೆತನವನ್ನು ತರುವುದು ಇವೆರಡೂ ನಿರ್ಣಾಯಕ ಅಂಶಗಳು. ಆದರೆ ಇವೆರಡೇ ಆದರೆ ಸಾಲದು ಎಂಬುದನ್ನು ಚೀನದ ಮೂರು ದಶಕಗಳು ತೋರಿಸಿಕೊಟ್ಟಿವೆ. ಚೀನೀ ಊಳಿಗಮಾನ್ಯತೆಯ ಭೂತ ಇನ್ನೂ ಮನುಷ್ಯನ ಮನಸ್ಸನ್ನು ಕಾಡುತ್ತಿದೆ. ಇಂದು ಈಡೇರಿಸಬೇಕಾದ ಮುಖ್ಯ ಕರ್ತವ್ಯ ಈ ಭೂತವನ್ನು ಓಡಿಸುವುದು.

ಚೀನದ ಕಮ್ಯುನಿಸ್ಟ್ ಪಕ್ಷವು ಸಾಮ್ರಾಜ್ಯಶಾಹಿ ವಿರೋಧಿ ಊಳಿಗಮಾನ್ಯ ವಿರೋಧಿ ಪ್ರಜಾಸತ್ತಾತ್ಮಕ ಕ್ರಾಂತಿಯಿಂದ ಆರಂಭವಾಯಿತು. ಕಳೆದ ಹೋರಾಟಗಳಲ್ಲಿ ಇದಕ್ಕೆ ಅದ್ಭುತವಾದ ಪ್ರಜಾಸತ್ತಾತ್ಮಕ ಪರಂಪರೆ ಇದೆ. ಆದರೆ ಅದು ಊಳಿಗಮಾನ್ಯತೆಗೆ ಬಲಿಯಾಗಿದೆ. ಕೆಲವು ಅಪವಾದಗಳನ್ನು ಬಿಟ್ಟರೆ ಅದರ ಮೊದಲ ಪ್ರಧಾನಕಾರ್ಯದರ್ಶಿ ಮತ್ತು ಅವರ ಉತ್ತರಾಧಿಕಾರಿಗಳು ಪಿತೃಪ್ರಧಾನ ಶೈಲಿಯ ಕಾರ್ಯಾಚರಣೆ ನಡೆಸಿದರು.

ಹುರುಪಯೋಗಕ್ಕೆ ದಾರಿ ಮಾಡುತ್ತವೆ ಮತ್ತು ಅದು ಆಧುನಿಕ ಬಲಿಷ್ಠ ಸಮಾಜವಾದಿ ದೇಶವನ್ನು ಕಟ್ಟುವುದಕ್ಕೂ ತೊಂದರೆ ಮಾಡುತ್ತದೆ

ಇದನ್ನು ನಿರ್ಲಕ್ಷಿಸಿದ್ದರಿಂದ ಲಿನ್ ಬಿಯಾವ್ ಮತ್ತು ದುಷ್ಟ ಚತುಷ್ಟಯವು ಹತ್ತು ವರ್ಷಗಳವರೆಗೆ ದೇಶವನ್ನು ಊಳಿಗಮಾನ್ಯತೆ ಜಾಡ್ಯದಲ್ಲಿ ಮುಳುಗಿಸಲು ಅವಕಾಶವಾಯಿತು. ದುಷ್ಟಕೂಟವನ್ನು ಮೆಟ್ಟಿದ ಮೇಲೂ ನವ ಚೀನದ ಮುನ್ನಡೆಯಲ್ಲಿ ಊಳಿಗಮಾನ್ಯ ಶಕ್ತಿಗಳು ಅಡ್ಡನಿಂತಿವೆ. ರಾಜಕೀಯ, ಸೈದ್ಧಾಂತಿಕ ಮತ್ತು ಸಂಘಟನಾತ್ಮಕ ನೀತಿಗಳಲ್ಲಿ ಅಡ್ಡಗಾಲು ಹಾಕುತ್ತಿದೆ. ಚೀನದ ಆಧುನೀಕರಣ ಮತ್ತು ರಾಜಕೀಯ ಜೀವನದಲ್ಲಿ ಪ್ರಜಾಪ್ರಭುತ್ವ ಇವುಗಳನ್ನು ತರಬೇಕಾದರೆ ಊಳಿಗಮಾನ್ಯ ಪ್ರಭಾವವನ್ನು ತೊಡೆದುಹಾಕುವುದು ಅಗತ್ಯ.

ಚೀನದಲ್ಲಿ ಊಳಿಗಮಾನ್ಯ ಸಮಾಜವು 2500 ವರ್ಷಗಳಿಂದ 3000 ವರ್ಷಗಳ ಕಾಲ ಬಾಳಿತು. ಚೀನದ ಊಳಿಗಮಾನ್ಯ ಪದ್ಧತಿಯು ಜಗತ್ತಿನಲ್ಲೇ ಅದ್ವಿತೀಯವಾಗಿ ಪಕ್ವತೆಯನ್ನು ಮುಟ್ಟಿತು. ಯೂರೋಪಿನ ಊಳಿಗಮಾನ್ಯ ಚರಿತ್ರೆಗಿಂತ ಚೀನದ್ದು ಭಿನ್ನವಾಗಿದೆ. ಯೂರೋಪಿನಲ್ಲಿ ರಾಜನ ಶಕ್ತಿಗಿಂತ ದೈವಶಕ್ತಿ ದೊಡ್ಡದೆಂಬ ಭಾವನೆ ಬಂದಿದ್ದರಿಂದ ಚರ್ಚುಗಳು ರಾಜನಿಗಿಂತ ಸರ್ವಾಧಿಕಾರ ಪಡೆದವು.

ಚೀನದ ಅಧಿಕಾರಿಗಳು ಮತ್ತು ಕಾಂಪ್ರಡಾರ್‌ಗಳು ಈ "ನಾಗರಿಕತೆ"ಯನ್ನು ಉಳಿಸಿಕೊಳ್ಳುವುದರಲ್ಲಿ ಆಸಕ್ತಿ ವಹಿಸಿದರು. ಅದು ಇವರ ವಿದೇಶಿ ಯಜಮಾನರಿಗೆ ಲಾಭಕರವಾಗುತ್ತಿದ್ದುದಲ್ಲದೆ, ಚೀನವನ್ನು ನಿಯಂತ್ರಿಸುವುದರಲ್ಲಿ ಇಬ್ಬರಿಗೂ ಪ್ರಯೋಜನವಾಗುತ್ತಿತ್ತು. ಊಳಿಗಮಾನ್ಯ ಸಿದ್ಧಾಂತ ಮತ್ತು ಸಾಮ್ರಾಜ್ಯಶಾಹಿ ಮನೋಭಾವ ಇವೆರಡೂ ಚೀನ ಸಮಾಜದಲ್ಲಿ ಶತಮಾನದವರೆಗೆ ನಿಂತವು.

ಚೀನದ ರಾಷ್ಟ್ರೀಯ ಬೂರ್ಜ್ವಾ ವರ್ಗವು ರಾಜಕೀಯವಾಗಿ ಕೆಟ್ಟಸ್ಥಿತಿಯಲ್ಲಿದ್ದಂತೆಯೇ ಸಾಂಸ್ಕೃತಿಕವಾಗಿ ಮತ್ತು ಸೈದ್ಧಾಂತಿಕವಾಗಿ ಇನ್ನೂ ಕೆಟ್ಟ ಸ್ಥಿತಿಯಲ್ಲಿತ್ತು. ಆದರ ಕೆಲವು ಸದಸ್ಯರು ಊಳಿಗಮಾನ್ಯ ಸಿದ್ಧಾಂತಕ್ಕೆ ವಿರೋಧ ವ್ಯಕ್ತಪಡಿಸಿದಾಗ, ಊಳಿಗಮಾನ್ಯ ಸಿದ್ಧಾಂತ ಮತ್ತು ಸಾಮ್ರಾಜ್ಯಶಾಹಿ ಮನೋಭಾವದ ಮೈತ್ರಿಯು ಅದನ್ನು ಹಿಮ್ಮೆಟ್ಟಿಸುತ್ತಿತ್ತು. ಬೂರ್ಜ್ವಾ ಪ್ರಜಾಪ್ರಭುತ್ವವಾದಿ ಕ್ರಾಂತಿಯ ಧೀಮಂತನಾದ ಸನ್‌ಯಾತ್‌ಸೆನ್ ಕೂಡ ಚರಿತ್ರೆಯ ಮತ್ತು ಅವನ ವರ್ಗದ ಮಿತಿಗಳನ್ನು ದಾಟಿಬರಲು ಆಗಲಿಲ್ಲ.

ತನ್ನ ಮುಂದುವರೆದ ಉತ್ಪಾದನಾ ಶಕ್ತಿಗಳನ್ನು ಪ್ರತಿನಿಧಿಸುತ್ತಿದ್ದ ಸಮಕಾಲೀನ ಕಾರ್ಮಿಕವರ್ಗವನ್ನು ಬಿಟ್ಟರೆ ಸಾಮ್ರಾಜ್ಯಶಾಹಿ ವಿರೋಧಿ, ಊಳಿಗ

ಮೇ 4ರ ಚಳುವಳಿಯ ನಂತರ ಚೀನದ ಕಮ್ಯುನಿಸ್ಟ್ ಪಕ್ಷ ಸ್ಥಾಪನೆಗೊಂಡು ಕಾರ್ಮಿಕರ ಮತ್ತು ರೈತರ ದೈನಂದಿನ ಕ್ರಾಂತಿಕಾರಿ ಚಳುವಳಿಗಳನ್ನು ಹೂಡಲಾಯಿತು. ಸಿದ್ಧಾಂತ ಮತ್ತು ಸಂಸ್ಕೃತಿಯನ್ನು ಮುನ್ನಡೆಸುವ ಕೆಲಸ ದ್ವಿತೀಯ ಪ್ರಾಮುಖ್ಯವನ್ನು ಪಡೆದರೂ ಸಹ, ಮೇ 4ರ ಚಳುವಳಿ ಮತ್ತು ದೇಶದಾದ್ಯಂತ ವಿಮೋಚನೆ ಇವುಗಳ ನಡುವಣ 30 ವರ್ಷಗಳ ಅವಧಿಯಲ್ಲಿ ನಡೆದ ಊಳಿಗಮಾನ್ಯ ವಿರೋಧಿ ಹೋರಾಟವನ್ನು ಕಡಿಮೆ ಎನ್ನುವಂತಿಲ್ಲ. ಆದರೂ ಮಾಡಬೇಕಾಗಿರುವುದು ಇನ್ನೂ ಬಹಳ ಇದೆ.

ಚೀನದ ಊಳಿಗಮಾನ್ಯ ಆಲೋಚನೆ ಯೂರೋಪಿನದಕ್ಕಿಂತ ಇನ್ನೂ ಗಟ್ಟಿಯದಾಗಿರುವುದರಿಂದ ಚೀನದ ಕಾರ್ಮಿಕವರ್ಗವು ಇದನ್ನು ತುಂಬ ಉಗ್ರವಾಗಿ ಹೋರಾಡಿ ನಾಶಮಾಡಬೇಕು. ಜೊತೆಗೆ ಉತ್ಪಾದನಾ ಶಕ್ತಿಗಳ ಅಗಾಧ ವಿಸ್ತರಣೆಯೂ ಅಗತ್ಯವಾಗಿದೆ. ಇದು ಸಣ್ಣ ಉತ್ಪಾದಕನ ಮಿತಿಗಳಿಗಿಂತ ಆಚೆ ಕಣ್ಣುಹಾಯಿಸಲು ಜನಕ್ಕೆ ಸಹಾಯ ಮಾಡುತ್ತದೆ.

ನ್ನಾಗಿ ಮಾಡಿಕೊಂಡರೆ, ಇದರ ಪರಿಣಾಮ ಕಾಲ್ಪನಿಕ "ಬಂಡವಾಳಶಾಹಿ"ಯೊಡನೆ ಹೋರಾಡುವುದೇ ಆಗುತ್ತದೆ. ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ಜೀವನವು ಹಿನ್ನಡೆಗೆ ಸಂದರೂ ಸಲ್ಲಬಹುದು.

"ಸಾಂಸ್ಕೃತಿಕ ಕ್ರಾಂತಿ"ಯ ಕಾಲದಲ್ಲಿ ಈ ಹಿನ್ನಡೆ ವಿಶೇಷವಾಗಿ ನಡೆಯಿತು. ಲಿನ್‌ಬಿಯಾವ್ ಮತ್ತು ದುಷ್ಟಕೂಟದ ಪ್ರತಿಗಾಮಿ ಆಲೋಚನೆಯು ಊಳಿಗಮಾನ್ಯ-ಅಧಿಕಾರಶಾಹಿ ಸರ್ವಾಧಿಕಾರವೇ ಆಗಿತ್ತು. ದುಷ್ಟಕೂಟವನ್ನು ಹಿಮ್ಮೆಟ್ಟಿಸಿದ ನಂತರ ಚೀನವು ಸೈದ್ಧಾಂತಿಕ ವಿಚಾರಗಳನ್ನು ಸರಿಪಡಿಸಿಕೊಳ್ಳುತ್ತಿದೆ. ಮೇ 4ರ ಚಳುವಳಿ, 1942ರ ಯೇನನ್‌ನ ತಿದ್ದುಪಡಿಪ್ರಚಾರ ಇವುಗಳಾದ ನಂತರ ಇದು ಮೂರನೆಯದು. ಈ ಪ್ರಸ್ತುತ ಚಳುವಳಿಯಲ್ಲಿ ಊಳಿಗಮಾನ್ಯ ಪ್ರಭಾವವನ್ನು ತಡೆಯುವುದು ಪ್ರಮುಖವಾಗಿದೆ.

ನಿಧಿಯಶೋಧ

ಚೀನದ ಆಧುನೀಕರಣಕ್ಕೆ ಬೇಕಾಗಿರುವುದೇನು? ಸಂಪನ್ಮೂಲಗಳು,

ಯೇನನ್‌ನಲ್ಲಿ ಕಾ ಮ್ರೇಡ್ ಮಾವೋ ತ್ಸೆ ತುಂಗರು ಆರಂಭಿಸಿದ ತಿದ್ದುಪಡಿ ಪ್ರಚಾರವು ಮೇ 4ರ ಚಳುವಳಿಯ ವೈಜ್ಞಾನಿಕ ಮತ್ತು ಪ್ರಜಾಸತ್ತಾತ್ಮಕ ಪರಂಪರೆಯನ್ನು ಮತ್ತೆ ಆರಂಭಿಸಿತು. ಪಕ್ಷವು ಅಧಿಕಾರಕ್ಕೆ ಬಂದನಂತರ ಊಳಿಗಮಾನ್ಯ ವಿಷಯವನ್ನು ತೆಗೆಯುವ ಸಕಾಲಿಕ ಗಂಭೀರ ಮತ್ತು ವ್ಯವಸ್ಥಿತ ಪ್ರಯತ್ನವನ್ನು ಮಾಡುವುದರಲ್ಲಿ ವಿಫಲವಾಯಿತು. 1950ರ ಮಧ್ಯದ ನಂತರ ಪಿತೃಪ್ರಧಾನತೆ, ಒಬ್ಬನೇ ವ್ಯಕ್ತಿ ಎಲ್ಲವನ್ನೂ ನಿರ್ಧರಿಸುವುದು, ಅಧಿಕಾರಶಾಹಿ ಇವೆಲ್ಲವೂ ಕ್ರಮೇಣ ಅವರ ತಲೆಗಳಲ್ಲಿ ತುಂಬಿಕೊಂಡವು. ದುಷ್ಟಕೂಟವು ಪಕ್ಷ ಮತ್ತು ದೇಶದ ಅಂಗಗಳಲ್ಲಿ ತೂರಿಕೊಂಡ ಅಂಶವೇ ಪಕ್ಷವು ಊಳಿಗಮಾನ್ಯತೆಯಿಂದ ಎಷ್ಟು ಕೆಟ್ಟಿತ್ತು ಎಂಬುದನ್ನು ತೋರಿಸುತ್ತದೆ.

ದುಷ್ಟಕೂಟವು ಊಳಿಗಮಾನ್ಯ ಸರ್ವಾಧಿಕಾರವನ್ನು ಸ್ಥಾಪಿಸಲು ಊಳಿಗಮಾನ್ಯ ಕ್ರಮಗಳನ್ನು ಬಳಸಿತು. ಹೊಸ ರೀತಿಯ ಅಂಧಶ್ರದ್ಧೆ

(6ನೇ ಪುಟ ನೋಡಿ)

ಊಳಿಗಮಾನ್ಯ ಅವಶೇಷಗಳನ್ನು ನಾಶಮಾಡಬೇಕಾದ ಅಗತ್ಯ

(5ನೇ ಪುಟದಿಂದ)

ಯನ್ನು ಹರಿದಿತು. ಕಾರ್ಮಿಕನಾಯಕನನ್ನು ದೈವೀಕರಿಸಿತು. ಇವರು ಎಲ್ಲೆಲ್ಲಿ ಕೈಹಾಕಿದರೋ ಅಲ್ಲೆಲ್ಲ ಪಕ್ಷದೊಳಗಿನ ಪ್ರಜಾಸತ್ತೆ, ಜನತೆಯ ಪ್ರಜಾಸತ್ತೆ ಇವು ನಾಶವಾದಿ, ಮನುಷ್ಯನ ಮೂಲಭೂತ ಹಕ್ಕುಗಳು ದಮನವಾದುವು.

ಸಮಾಜವಾದಿ ಪ್ರಜಾಪ್ರಭುತ್ವ

ದುಷ್ಟಕೂಟವನ್ನು ನಿರ್ಮೂಲಗೊಳಿಸಿದನಂತರ ಕೆಲವು ಬದಲಾವಣೆಗಳು ಆಗಿವೆ. ಪ್ರಜಾಸತ್ತೆಗೆ ಹೆಚ್ಚು ವ್ಯಾಪ್ತಿ ಕೊಡಲಾಗಿದೆ. ನ್ಯಾಯಾಂಗ ವ್ಯವಸ್ಥೆಯನ್ನು ಬಲಪಡಿಸಲಾಗಿದೆ. ವಾತಾವರಣ ಖಂಡಿತ ಬದಲಾಗಿದೆ. ಸಮಾಜವಾದಿ ಹಂತಗಳನ್ನು ಇನ್ನೂ ಮುಟ್ಟಲಾಗಿಲ್ಲ.

ಸಮಾಜವಾದಿ ಪ್ರಜಾಪ್ರಭುತ್ವದ ಸಂಸ್ಥೆಗಳನ್ನು ತುಂಬ ಬಲಿಷ್ಠವಾದ ಆಧಾರದ ಮೇಲೆ ನಿಲ್ಲಿಸಲು ಚೀನಾದ ಪಕ್ಷ ಮತ್ತು ರಾಜ್ಯ ವ್ಯವಸ್ಥೆಗಳು ಶ್ರಮಿಸಬೇಕಾಗಿದೆ. ಪಕ್ಷದೊಳಗಿನ ಪ್ರಜಾಸತ್ತಾತ್ಮಕ ಜೀವನ ಮತ್ತು ಜನತೆಯ ಪ್ರಜಾಸತ್ತಾತ್ಮಕ ಜೀವನಗಳಿಗೂ ಈ ಅಗತ್ಯ ತುಂಬಾ ಇದೆ. ಹೀಗಲ್ಲದೆ ಇನ್ನಾವ ದಾರಿಯಿಂದಲೂ ಊಳಿಗಮಾನ್ಯ ಸಂಬಂಧಗಳನ್ನು ರಾಜಕೀಯವಾಗಿ ನಿರ್ಮೂಲ ಮಾಡಲು ಸಾಧ್ಯವಿಲ್ಲ. ಊಳಿಗಮಾನ್ಯ ಕಸವನ್ನು ಗುಡಿಸಬೇಕಾದರೆ, ಊಳಿಗಮಾನ್ಯ ಪಿತೃಪ್ರಧಾನತೆಯ ವಿರೋಧಿಯಾದ ಸಮಾಜವಾದಿ ಪ್ರಜಾಪ್ರಭುತ್ವ ಎಂಬ ಪೊರಕೆಯಿಂದ ಮಾತ್ರ ಸಾಧ್ಯ.

ಚೀನದ ಪಕ್ಷವು ಆ ದೇಶದಂತೆಯೇ ದೊಡ್ಡದು. ಹಿಂದೆಂದೂ ಪ್ರಯತ್ನಿಸದಿದ್ದ ದೊಡ್ಡ ಕಾರ್ಯವನ್ನು ನಾವು ಆರಂಭಿಸಿದ್ದೇವೆ. ನಮ್ಮ ಭವಿಷ್ಯವನ್ನು ಕೆಲವೇ ಮಂದಿಯ ಕೈಯಲ್ಲಿಡುವುದು ತುಂಬ ಅಭದ್ರವಾದದ್ದು ಮತ್ತು ಅಪಾಯಕಾರಿಯಾದದ್ದು. ಸಮಾಜವಾದಿ ಪ್ರಜಾಪ್ರಭುತ್ವ ಎಂದರೆ ಪಕ್ಷ ಮತ್ತು ರಾಜ್ಯವ್ಯವಸ್ಥೆಯ (State) ಭವಿಷ್ಯವನ್ನು ನಿಜವಾಗಿ ಇಡೀ ಜನತೆಯ ಕೈಯಲ್ಲಿಡುವುದು. ನಾಲ್ಕು ಆಧುನೀಕರಣಗಳು ಸಹ ಸಮಾಜವಾದಿ ಪ್ರಜಾಪ್ರಭುತ್ವದ ಮೇಲೆ ಅವಲಂಬಿತವಾಗುತ್ತವೆ.

ಕಾನೂನಿನಲ್ಲಿ ಪ್ರಜಾಪ್ರಭುತ್ವಕ್ಕೆ ಇರುವ ಗ್ಯಾರಂಟಿ ಎಂದರೆ ಸಮಾಜವಾದಿ ನ್ಯಾಯಾಂಗ ವ್ಯವಸ್ಥೆ. ಇದು ಜನತೆಯ ಹಕ್ಕುಗಳು, ಸ್ವಾತಂತ್ರ್ಯಗಳು, ಗೌರವ ಇವುಗಳನ್ನು ಕಾಪಾಡಿ, ಸಮಾಜವಾದಿ ರಚನೆಯಲ್ಲಿ ಪ್ರತಿಯೊಬ್ಬ ಪ್ರಜೆಯೂ ತನ್ನ ಕೌಶಲವನ್ನು ಉಪಯೋಗಿಸುವಂತೆ ಮಾಡಬೇಕು. ಸಮಾಜವಾದಿ ನ್ಯಾಯಾಂಗ ವ್ಯವಸ್ಥೆಯು ಜನರನ್ನು ಕಾಪಾಡುವ ದಾರಿಯಿಂದ ಒಮ್ಮೆ ದೂರಹೋಗಿ ಬಿಟ್ಟಿತೆಂದರೆ ಅದು ಸುಲಭವಾಗಿ ಊಳಿಗಮಾನ್ಯ ಸರ್ವಾಧಿಕಾರ ಮತ್ತು ಜನರ ಬಗ್ಗೆ ಕ್ರೌರ್ಯ ಇವುಗಳನ್ನು ಪಡೆದುಕೊಳ್ಳುತ್ತದೆ. ನ್ಯಾಯಾಂಗ ವ್ಯವಸ್ಥೆ ಎಂದೂ ಜನರ ಯಜಮಾನನ ಹಾಗೆ ವರ್ತಿಸಬಾರದು.

ಆರ್ಥಿಕ ಕ್ಷೇತ್ರದಲ್ಲಿ ಕರ್ತವ್ಯಗಳು

ನಮ್ಮ ಆರ್ಥಿಕ ಜೀವನ ಮತ್ತು ಸಂಸ್ಥೆಗಳಲ್ಲೂ ಊಳಿಗಮಾನ್ಯ ಪ್ರಭಾವ ಎದ್ದು ಕಾಣುತ್ತದೆ. ಚೀನದ ಮೂಲಭೂತ ಆರ್ಥಿಕ ರಚನೆಯು ಜನತೆಯ ಸಮಾಜವಾದಿ ಒಡೆತನ ಮತ್ತು ಸಾಮೂಹಿಕ ಒಡೆತನ ಇವುಗಳೇ ಆಗಿದೆ. ಸಾಂಪ್ರದಾಯಿಕ ಆರ್ಥಿಕತೆಯಲ್ಲಿ ಮತ್ತು ಸಣ್ಣ ಉತ್ಪಾದಕ ರೂಢಿಗಳಲ್ಲಿ ಬದಲಾವಣೆಗಳ ಕೊರತೆ ಇರುವಾಗ, ಚೀನಾದ ಆರ್ಥಿಕತೆಯ ಮೇಲೆ ಊಳಿಗಮಾನ್ಯತೆಯ ಕೆಲವು ಅಂಶಗಳು ಇನ್ನೂ ಪ್ರಭಾವ ಬೀರುತ್ತಿವೆ.

ಇವು ಸಮಾಜವಾದಿ ಮಾರುವೇಷದಲ್ಲಿ ಕಾಣಿಸಿಕೊಂಡರೂ ಉತ್ಪಾದನಾ ಶಕ್ತಿಗಳ ಬೆಳವಣಿಗೆಗೆ ತೀವ್ರ ಅಪಾಯ ತರುತ್ತವೆ. ಸರಕುಗಳ ಚುರುಕಾದ ಸರಬರಾಜು, ಹಣಕಾಸು, ತಾಂತ್ರಿಕತೆ ಮತ್ತು ಯೋಜನಾಬದ್ಧ ಆರ್ಥಿಕತೆಯ ದುಡಿವ ಶಕ್ತಿ ಇವುಗಳ ಬಗ್ಗೆ ನಿರ್ಲಕ್ಷ್ಯ ಮುಂತಾದ್ದರಲ್ಲಿ ಅದು ಹಣಿಕಿಹಾಕುತ್ತದೆ. ವಿಶೇಷ ಕೌಶಲ, ದುಡಿಮೆ ವಿಭಜನೆ, ಪರಸ್ಪರ ಸಹಕಾರ, ಪರಸ್ಪರ ಸ್ಪರ್ಧೆ ಇವುಗಳಿಂದ ಕೂಡಿದ ಸುಧಾರಿತ ಸಮಾಜವಾದಿ ಭಾರೀ ಪ್ರಮಾಣದ ಉತ್ಪಾದನೆಯ ನಿರಾಕರಣೆ, ಮಡಿವಂತ, ಆರ್ಥಿಕ ರಾಜ್ಯದ ಕಲ್ಪನೆಗೆ ಅಂಟಿಕೊಳ್ಳುವುದು ಇವುಗಳಲ್ಲೂ ಊಳಿಗಮಾನ್ಯ ಪ್ರಭಾವ ಕಾಣಿಸಿಕೊಳ್ಳುತ್ತದೆ. ಸ್ವಯಂ ಅವಲಂಬನೆಯನ್ನು ಒತ್ತಿಹೇಳಿ, ಜಗತ್ತಿನ ಇತರರೊಂದಿಗೆ ದೇಶದ ಸಂಪರ್ಕವನ್ನು ಕಡಿದುಹಾಕುವುದು, ತಜ್ಞರ ಸೇವೆಯನ್ನು ನಿರಾಕರಿಸುವುದು ಸುಧಾರಿತ ವಿಜ್ಞಾನ ಮತ್ತು ತಾಂತ್ರಿಕತೆಯನ್ನು ಉತ್ಪಾದನೆ ಹೆಚ್ಚಳಕ್ಕೆ ಬಳಸಿಕೊಳ್ಳಲು ನಿರಾಕರಿಸುವುದು ಇವುಗಳಲ್ಲೂ ಅದು ಇರುತ್ತದೆ.

ಆರ್ಥಿಕ ಕಾರ್ಯದಲ್ಲಿ ಊಳಿಗಮಾನ್ಯತೆ ಮತ್ತು ಬಂಡವಾಳಶಾಹಿ, ಸಮಾಜವಾದ ಇವುಗಳ ನಡುವೆ ಪ್ರತ್ಯೇಕಿಸುವ ಗೆರೆ ಇಲ್ಲದೆ ಊಳಿಗಮಾನ್ಯ ಕಲ್ಪನೆಗಳನ್ನೇ ಸಮಾಜವಾದಿ ಎಂದು ತಪ್ಪು ತಿಳಿದು ಒತ್ತಾಯ ಹೇರಲಾಗಿದೆ. ಕೆಲವೊಮ್ಮೆ ಸಮಾಜವಾದಿ ಕಲ್ಪನೆಗಳನ್ನೇ ಬಂಡವಾಳಶಾಹಿ ಎಂದು ತಿಳಿದು ಖಂಡಿಸಲಾಗಿದೆ. ಇದರಿಂದ ತುಂಬ ನಷ್ಟವಾಗಿದೆ.

ಉತ್ಪಾದನೆ ಮತ್ತು ವಿತರಣೆಯಲ್ಲಿ ಊಳಿಗಮಾನ ಪ್ರಭಾವವನ್ನು ತೊಡೆದು ಹಾಕಿದಾಗ ಮಾತ್ರ ಕಾರ್ಮಿಕರು ತಮ್ಮ ಉತ್ಪಾದನಾ ಘಟಕಗಳ ಯಜಮಾನರಾಗಬಲ್ಲರು.

ಪಕ್ಷದ ವರ್ಧನೆ

ಚೀನದಲ್ಲಿ ವಿವಿಧ ಚಾರಿತ್ರಿಕ ಕಾರಣಗಳಿಗಾಗಿ ಕಾರ್ಯಕರ್ತರು ಜೀವನಾವಧಿ ತಮ್ಮ ಸ್ಥಾನಗಳಲ್ಲೇ ಇರುತ್ತಾರೆ. ಇದರಿಂದ ಪಿತೃಪ್ರಧಾನತೆ ಮತ್ತು ಅಧಿಕಾರಶಾಹಿ ಬೆಳೆಯುತ್ತದೆ ಎಂದು ಅನುಭವ ತೋರಿಸಿದೆ. ಇದು ಸ್ಥಗಿತತೆಯನ್ನು ಉಂಟುಮಾಡುವುದಲ್ಲದೆ ಪಕ್ಷದ ಒಳಹೊರಗೆ ಬೆಳೆಯುವ ಹೊಸ ಶಕ್ತಿಗಳನ್ನು ತೊಡೆದುಹಾಕುತ್ತದೆ. ವಿವಿಧ ಸ್ಥಾನಗಳಿಗೆ ಕಾರ್ಯಕರ್ತರು ಬರುವಾಗ ವೈಜ್ಞಾನಿಕ, ಪ್ರಜಾಸತ್ತಾತ್ಮಕ ಉದ್ಯೋಗ ವ್ಯವಸ್ಥೆ ಬರಬೇಕಾಗಿದೆ.

ಊಳಿಗಮಾನ್ಯತೆಯ ಪ್ರಭಾವವನ್ನು ತೊಡೆದುಹಾಕುವುದು ಪಕ್ಷದ ವರ್ಧನೆಯಲ್ಲಿನ ತುರ್ತು ಕರ್ತವ್ಯವಾಗಿದೆ.

○

ಎ.ಐ.ಸಿ.ಸಿ. ಅಧಿವೇಶನ

(4ನೇ ಪುಟದಿಂದ)

ಸರ್ವಾಧಿಕಾರೀ ಆಡಳಿತಕ್ಕೆ ದಾರಿ ಮಾಡಿಕೊಡುತ್ತವೆ.

ಆರ್ಥಿಕ ರಂಗದಲ್ಲಿ ಮಾತ್ರವಲ್ಲ ನಾಗರಿಕ ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಹಕ್ಕುಗಳು ಹಾಗೂ ಕಾರ್ಮಿಕ ಸಂಘಟನೆಯ ಹಕ್ಕುಗಳು ಇವೆಲ್ಲಾ ರಂಗಗಳಲ್ಲಿ ಜನತೆಯ ಮೇಲೆ ಸರ್ವತೋಮುಖ ದಾಳಿ ಸದ್ಯದಲ್ಲೇ ಆರಂಭವಾಗಲಿದೆ. ಎ.ಐ.ಸಿ.ಸಿ (ಐ) ಅಧಿವೇಶನ ಈ ಅಪಾಯಕಾರೀ ಸೂಚನೆಯನ್ನು ಕೊಟ್ಟಿದೆ. ಎಡ ಹಾಗೂ ಪ್ರಜಾಪ್ರಭುತ್ವ ಶಕ್ತಿಗಳು ಇದನ್ನು ನಿರ್ಲಕ್ಷಿಸಿದರೆ ಗಂಡಾಂತರ ತಪ್ಪಿದ್ದಲ್ಲ.

ಈ ದಿಕ್ಕಿನಲ್ಲಿ ಕೆಲವು ಪ್ರಯತ್ನಗಳಾಗಿವೆ; ಕೆಲವಕ್ಕೆ ಯಶಸ್ಸು ಸಿಕ್ಕಿದೆ. ಆರು ಪಕ್ಷಗಳ ಸಂಯೋಜಿತ ಸಮಿತಿ ಅಸ್ತಿತ್ವಕ್ಕೆ ಬಂದಿದೆ. ಬೇರೆ ಬೇರೆ ಜನವಿಭಾಗಗಳ ಸಂಯುಕ್ತ ಹೋರಾಟಗಳು ಪ್ರಾರಂಭವಾಗಿವೆ. ಈಗಿನ ಪರಿಸ್ಥಿತಿಯಲ್ಲಿ ಎಡ ಹಾಗೂ ಪ್ರಜಾಪ್ರಭುತ್ವ ಶಕ್ತಿಗಳ ಐಕ್ಯತೆಗಾಗಿ ಜರೂರಾದ, ಹೆಚ್ಚು ಶಕ್ತಿಯುತವಾದ ಪ್ರಯತ್ನಗಳು ನಡೆಯಬೇಕಾಗಿವೆ; ಸಂಯುಕ್ತ ಚಳುವಳಿಗಳನ್ನು ಮತ್ತಷ್ಟು ಮುಂದುವರಿಸಿ ಸಾಧ್ಯವಾದಷ್ಟು ಹೆಚ್ಚು ಜನರನ್ನು ಒಳಗೊಂಡು ಜನತೆಯ ಹಾಗೂ ದೇಶದ ಹಿತಾಸಕ್ತಿಗಳನ್ನು ರಕ್ಷಿಸಲು ಒಂದು ವಿಶಾಲ ರಂಗಕ್ಕಾಗಿ ಪ್ರಯತ್ನಗಳು ನಡೆಯಬೇಕಾಗಿದೆ. ○

ಬ್ರಿಟಿಷ್ ಬಂಡವಾಳ ಮತ್ತು ರಾಜಕುಮಾರ

(3ನೇ ಪುಟದಿಂದ)

ಜ್ಯಶಾಹಿಯ ವಿರುದ್ಧ ಎರಡು ಶತಮಾನಗಳ ಕಾಲ ಹೋರಾಡಿ ದಾಸ್ಯ ಸಂಖಲೆಯಿಂದ ಬಿಡುಗಡೆ ಹೊಂದಿದ ಭಾರತೀಯರ ಸ್ವಾಭಿಮಾನ ಎಲ್ಲಡಗಿತು?

ಆರ್ಥಿಕ ದುಃಸ್ಥಿತಿಯಲ್ಲಿದ್ದ ಬ್ರಿಟನ್ನಿನ ಹಿತಾಸಕ್ತಿಗಳನ್ನು ಕುದುರಿಸಲು ಬ್ರಿಟಿಷ್ ಬಂಡವಾಳವನ್ನು ಭಾರತದಲ್ಲಿ ಹೂಡಿ ಲಾಭ ಗಳಿಸಲು ರಾಜಕುಮಾರ ತನ್ನ ಕೈಗಾರಿಕಾ ತಜ್ಞರ ತಂಡದೊಡನೆ ಬಂದಿರುವುದು ಜನಸಾಮಾನ್ಯರಿಗೆ ತಿಳಿಯದು. ಭಾರತದ ಯುದ್ಧ ವಿಮಾನ ಪಡೆಗೆ ಬ್ರಿಟಿಷ್ ಜಾಗ್ವಾರ್ ಕಂಪೆನಿಯು 2000 ಕೋಟಿಗೂ ಮೀರಿದ ಭಾರೀ ವೆಚ್ಚದ ವಿಮಾನಗಳನ್ನು ಸರಬರಾಜು ಮಾಡಲು, ಕ್ರಮೇಣ ಅವುಗಳನ್ನು ಭಾರತದಲ್ಲಿಯೇ ಜೋಡಿಸಲು, ಅಂತಿಮವಾಗಿ ಅವುಗಳನ್ನು ಭಾರತದಲ್ಲಿಯೇ ತಯಾರಿಸಲು ಯೋಜನೆ ಹಾಕಿಕೊಂಡು ರಾಜಕುಮಾರ ಬ್ರಿಟಿಷ್ ಬಂಡವಾಳಶಾಹಿಗಳ ಪ್ರತಿನಿಧಿಯಾಗಿ ಬಂದಿದ್ದಾನೆ. ಈ ಯೋಜನೆಯು ಕೈಗೂಡಿದರೆ, ಬ್ರಿಟಿಷ್ ದೇಶಕ್ಕೆ ಈ ಶತಮಾನದ ಅಂತ್ಯದ ವರೆಗೂ ಭಾರೀ ಲಾಭ ಗಿಟ್ಟಿಸುವ ಉದ್ಯಮ ದೊರಕಿದಂತಾಗುವುದು. 1974ರಲ್ಲಿಯೇ ಇದಕ್ಕಾಗಿ ಸಂಧಾನಗಳು ನಡೆಯುತ್ತಿದ್ದು 1978ರಲ್ಲಿ ಈ ಯೋಜನೆಯ ಕುರಿತು ಒಂದು ಒಪ್ಪಂದವೂ ಆಗಿತ್ತು. ಸ್ವಾವಲಂಬನೆಯ, ಮಿತವ್ಯಯದ, ಸ್ವದೇಶೀ ತಂತ್ರಜ್ಞಾನ ಬಳಕೆಯ ದೃಷ್ಟಿಯಿಂದ ಈ ಜಾಗ್ವಾರ್ ಯುದ್ಧ ವಿಮಾನಗಳನ್ನು ಭಾರತ ಪಡೆಯುವುದಕ್ಕೆ ದೇಶದ ವಿಜ್ಞಾನಿಗಳಿಂದಲೂ ತಂತ್ರಜ್ಞಾನಿಗಳಿಂದಲೂ, ರಾಜಕೀಯ ಧುರೀಣರಿಂದಲೂ ಬಹಳ ವಿರೋಧ ಇದೆ. ●

ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್‌ನ ಕೇಂದ್ರ ಸಮಿತಿ ಸಭೆ

ಇತ್ತೀಚೆಗೆ ದೆಹಲಿಯಲ್ಲಿ ಡಿ.ವೈ.ಎಫ್.ಐ.ನ ಕೇಂದ್ರಸಮಿತಿ ಸಭೆಸೇರಿ ದೇಶಾದ್ಯಂತ ಬೆಳೆಯುತ್ತಿರುವ ಬೆಲೆಯೇರಿಕೆ, ನಿರುದ್ಯೋಗ ಮತ್ತು ದೇಶದಲ್ಲಿ ಕುಸಿಯುತ್ತಿರುವ ಕಾನೂನು ಪರಿಸ್ಥಿತಿಯ ಬಗ್ಗೆ ತನ್ನ ತೀವ್ರ ಕಳವಳ ವ್ಯಕ್ತಪಡಿಸಿದೆ.

ಕೇಂದ್ರಸರಕಾರ ಅನುಸರಿಸಿಕೊಂಡು ಬಂದಿರುವ ಆರ್ಥಿಕ ನೀತಿಯಿಂದಾಗಿ ದೇಶದಲ್ಲಿ ತೀವ್ರ ರೀತಿಯ ಬಿಕ್ಕಟ್ಟು ಉಂಟಾಗಿ ದಿನನಿತ್ಯ ಜೀವನಾವಶ್ಯಕ ವಸ್ತುಗಳ ಬೆಲೆಗಳು ಹೆಚ್ಚಿಗಿವೆ, ಅದೇ ಪ್ರಮಾಣದಲ್ಲಿ ನಿರುದ್ಯೋಗ ಮತ್ತು ಬಡತನ ಹೆಚ್ಚುತ್ತಿರುವುದರಿಂದ ಯುವಕರು, ವಿದ್ಯಾರ್ಥಿಗಳು ಮತ್ತು ಜನಸಾಮಾನ್ಯರು ಸಮಸ್ಯೆಗಳ ಪರಿಹಾರಕ್ಕಾಗಿ ತೀವ್ರ ರೀತಿಯ ಹೋರಾಟಕ್ಕೆ ಇಳಿದಿದ್ದಾರೆ. ಮೊದಲಿನಿಂದಲೂ ಆಡಳಿತಪಕ್ಷದ ಭದ್ರ ಬುನಾದಿಯಾಗಿರುವ ಉತ್ತರ ಪ್ರದೇಶದಲ್ಲಂತೂ ಕಾನೂನು ಪರಿಸ್ಥಿತಿ ತೀರ ಹದಗೆಟ್ಟಿದೆ. ಇತ್ತೀಚೆಗೆ ಭಾಗಲ್ಪುರದಲ್ಲಿ 37 ಯುವಕರ ಕಣ್ಣುಕಿತ್ತ ಪ್ರಕರಣದಿಂದೀಚೆಗೆ ಪೋಲೀಸರಲ್ಲೂ ಅಶಾಂತಿ ಹಬ್ಬಿದೆ. ಇಡೀ ಉತ್ತರ ಭಾರತದಲ್ಲಿ ಜನತೆಯ ಚಳುವಳಿ ತೀವ್ರರೀತಿಯಾಗಿ ಬೆಳೆದುಬರುತ್ತಿದೆ.

ಪಂಜಾಬ್ ಮತ್ತು ಹರಿಯಾಣಾ ರಾಜ್ಯಗಳಲ್ಲಿ ಯುವಕರು ಮತ್ತು ವಿದ್ಯಾರ್ಥಿಗಳು ಬಸ್ಸುದರ ಏರಿಕೆಯ ವಿರುದ್ಧ ಮತ್ತು ಇತರ ಕೆಲವು ಸಮಸ್ಯೆಗಳಿಗೆ ಶಾಂತಿಯುತ ಪ್ರದರ್ಶನ ನಡೆಸುತ್ತಿದ್ದಾಗ, ಆಯಾ ರಾಜ್ಯ ಸರಕಾರಗಳು ವಿನಾಕಾರಣ ಲಾಠಿ ಚಾರ್ಜ್ ಮತ್ತು ಗೋಲಿಬಾರ್ ಮಾಡಿ ಇಬ್ಬರು ಯುವಕರನ್ನು ಬಲಿತೆಗೆದುಕೊಂಡಿದ್ದಾರೆ. ಈ ಬರ್ಬರ ಕೃತ್ಯದ ವಿರುದ್ಧ ಎರಡೂ ರಾಜ್ಯಗಳ ಜನತೆ ತೀವ್ರ ಪ್ರತಿಭಟನೆ ವ್ಯಕ್ತಪಡಿಸಿವೆ. ಡಿ.ವೈ.ಎಫ್.ಐ.ನ ಕೇಂದ್ರ ಕಾರ್ಯಕಾರೀ ಸಮಿತಿ ಸದಸ್ಯ ಕಾಂ. ದಲ್ಜಿತ್ ಸಿಂಗ್ ಇನ್ನೂ ಜೈಲಿನಲ್ಲಿದ್ದಾರೆ.

ಸರಕಾರದ ಈ ಕೃತ್ಯಗಳಿಂದ ರೊಚ್ಚಿಗೆದ್ದ ಯುವಕರು, ವಿದ್ಯಾರ್ಥಿಗಳು ಮತ್ತು ಜನತೆ ರಾಷ್ಟ್ರೀಯ ಭದ್ರತಾ ಶಾಸನವನ್ನು ಲೆಕ್ಕಿಸದೆ ಹೋರಾಟಕ್ಕೆ ಇಳಿದಿದ್ದಾರೆ. ಜನತೆಯ ಸಮಸ್ಯೆಗಳನ್ನು ನಿವಾರಿಸುವುದರ ಬದಲು ಜನರ ಹೋರಾಟಗಳನ್ನು ಸರ್ವಾಧಿಕಾರೀ ಕ್ರಮಗಳಿಂದ, ಪೋಲೀಸರ ಗೋಲಿಬಾರ್, ಲಾಠಿ ಚಾರ್ಜುಗಳಿಂದ ಹತ್ತಿಕ್ಕಲಾಗುತ್ತಿದೆ. ಇದು ಸಾಧ್ಯವಿಲ್ಲವೆಂದು ಜನತೆ ತೋರಿಸಿಕೊಡುತ್ತಿದೆ. ಇಂತಹ ಗಂಭೀರ ಪರಿಸ್ಥಿತಿಯಲ್ಲಿ ದೇಶದ ಯುವಜನತೆ, ವಿದ್ಯಾರ್ಥಿಗಳು ಒಟ್ಟುಗೂಡಿ ಸರಕಾರದ ದಮನಕಾರಿ ಕ್ರಮಗಳ ವಿರುದ್ಧ ಹೋರಾಟಮಾಡಬೇಕೆಂದು ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ ಕರೆಕೊಟ್ಟಿದೆ.

●

ಪುತ್ತೂರಿನಲ್ಲಿ ಎಸ್.ಎಫ್.ಐ. ಸಭೆ

ಪುತ್ತೂರು ತಾ|| ಎಸ್.ಎಫ್.ಐ. ಶಾಖೆಯ ಸಭೆಯು 21-12-1980ರಂದು ಕಾಂ. ನೋಣಯ್ಯನವರ ಅಧ್ಯಕ್ಷತೆಯಲ್ಲಿ ಸೇರಿತು. ಮುಖ್ಯ ಅತಿಥಿಗಳಾಗಿ ಬಿ. ರಾಮಕೃಷ್ಣ, ಡೀಕಯ್ಯ ಅವರು ಬಂದಿದ್ದರು. ಹುಕ್ರಪ್ಪ ಅವರು ಸ್ವಾಗತಿಸಿದರು.

ಬಿ. ರಾಮಕೃಷ್ಣ ಅವರು ಎಸ್.ಎಫ್.ಐ. ಧ್ಯೇಯಧೋರಣೆಗಳನ್ನು ವಿವರಿಸಿ ಮಾತನಾಡಿದರು. ಡೀಕಯ್ಯ ಅವರು ಎಸ್.ಎಫ್.ಐ.ಅನ್ನು ಬಲಪಡಿಸಲು ಕರೆಯಿತ್ತರು. ನಂತರ ಪದಾಧಿಕಾರಿಗಳನ್ನು ಚುನಾಯಿಸಲಾಯಿತು. ●

ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕರ ಸಾರ್ವತ್ರಿಕ ಮುಷ್ಕರ

ಬೆಂಗಳೂರಿನಲ್ಲಿರುವ ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕರು ಡಿಸೆಂಬರ್ 26 ರಂದು ಅನಿರ್ದಿಷ್ಟ ಕಾಲದ ಮುಷ್ಕರ ಹೂಡಿದ್ದಾರೆ. ಬಿ. ಎಚ್. ಇ. ಎಲ್. ಕಾರ್ಖಾನೆಗಳಲ್ಲಿ ಆದ ಒಪ್ಪಂದದ ಪ್ರಕಾರವಾಗಲೂ ಈ ಕನಿಷ್ಟ ವೇತನ ಬರಬೇಕೆಂಬುದೇ ಇವರ ಬೇಡಿಕೆ. ಬೆಂಗಳೂರಿನಲ್ಲಿಯೇ ಇರುವ ಸುಮಾರು 75 ಸಾವಿರ ಕಾರ್ಮಿಕರ ಜೊತೆಗೆ ಬಿ. ಇ. ಎಂ. ಎಲ್. [ಕೆ. ಜಿ. ಎಫ್.] ನ ಹತ್ತು ಸಾವಿರ ಕಾರ್ಮಿಕರೂ ಸೇರಿದ್ದಾರೆ. ಅಲ್ಲದೆ ದೇಶದ ನಾನಾ ಭಾಗಗಳಲ್ಲಿರುವ ಎಚ್. ಎ. ಎಲ್., ಎಚ್. ಎಮ್. ಟಿ. ಮತ್ತು ಐ. ಟಿ. ಐ. ನ ಘಟಕಗಳ ಎಲ್ಲಾ ಕಾರ್ಮಿಕರೂ ಮುಷ್ಕರದಲ್ಲಿ ಪಾಲ್ಗೊಂಡಿರುವರೆಂದು ವರ್ತಮಾನಪತ್ರಗಳು ವರದಿ ಮಾಡಿವೆ. ಕೇಂದ್ರ ಸರಕಾರದ ಕಾರ್ಮಿಕ ವಿರೋಧಿ ನೀತಿಯನ್ನು ಪ್ರತಿಭಟಿಸಿ ನಡೆಯುತ್ತಿರುವ ಈ ಮುಷ್ಕರದಲ್ಲಿ ಸುಮಾರು ಎರಡು ಲಕ್ಷ ಕಾರ್ಮಿಕರು ಭಾಗವಹಿಸಿರುವ ಅಂದಾಜಿದೆ.

1977ರಲ್ಲಿ ಸಂಬಳವನ್ನು ಪರಿಷ್ಕರಣ ಮಾಡಬೇಕೆಂದು ಈ ಕಾರ್ಮಿಕರು ಬೇಡಿಕೆ ಇಟ್ಟಿದ್ದರು. ಆಗ ತಾನೆ ಆಡಳಿತಕ್ಕೆ ಬಂದಿದ್ದ ಜನತಾ ಸರಕಾರ, ಈ ಕಾರ್ಮಿಕರು ಈಗಾಗಲೇ ಹೆಚ್ಚು ಸಂಬಳವನ್ನು ಪಡೆಯುತ್ತಿದ್ದಾರೆಂದೂ, ಕಾರಣ ಇವರ ಬೇಡಿಕೆಗಳ ಬಗ್ಗೆ ಮಾತುಕತೆಯೇ ಬೇಡವೆಂದೂ ತೀರ್ಮಾನಿಸಿತ್ತು.

ಜನತಾ ಸರಕಾರವು ಕಾರ್ಮಿಕರ ಕೂಲಿ ಮತ್ತು ವರಮಾನಗಳ ಬಗ್ಗೆ ತನ್ನ ಧೋರಣೆ ನಿರೂಪಿಸಲು "ಭೂತಲಿಂಗಂ ಪ್ಯಾನಲ್"ನ್ನು ನೇಮಿಸಿದ್ದರು. ಈ ಪ್ಯಾನಲ್‌ನ ತೀರ್ಮಾನ ಬರುವವರೆಗೂ ಮಾತುಕತೆ ನಡೆಸಬಾರದೆಂದು ಈ ಕಾರ್ಖಾನೆಗಳ ಆಡಳಿತ ವರ್ಗಗಳಿಗೆ ಬ್ಯೂರೋ ಆಫ್ ಪಬ್ಲಿಕ್ ಎಂಟರ್‌ಪ್ರೈಸಸ್ ಮೂಲಕ ಆದೇಶ ನೀಡಲಾಗಿತ್ತು. ಈ ಧೋರಣೆಯನ್ನು ಪ್ರತಿಭಟಿಸಲು 1977 ಡಿಸೆಂಬರ್‌ನಲ್ಲಿ ಹೈದರಾಬಾದಿನಲ್ಲಿ ಸಿ. ಐ. ಟಿ. ಯು. ವಿನ ಕಾಂ. ಪೂರ್ಣಚಂದ್ರ ರಾವ್ ನೇತೃತ್ವದಲ್ಲಿ ಸೇರಿಸಲ್ಪಟ್ಟ ಅಖಿಲಭಾರತ ಸಾರ್ವಜನಿಕ ಕ್ಷೇತ್ರಗಳ ಕಾರ್ಮಿಕರ ಸಮ್ಮೇಳನದ ತಿರ್ಮಾನದಂತೆ ಬೆಂಗಳೂರು ಮತ್ತು ಹೈದರಾಬಾದಿನಲ್ಲಿರುವ ಇದೇ ಕಾರ್ಮಿಕರು 1978 ಜನವರಿಯಲ್ಲಿ ಒಂದು ದಿವಸದ ಸಾಂಕೇತಿಕ ಮುಷ್ಕರ ಹೂಡಿದರು. ಈ ಮುಷ್ಕರವಾದ ಮೇಲೆ ಕೇಂದ್ರದ ಜನತಾ ಸರಕಾರವು ಮಾತುಕತೆ ನಡೆಸಬಹುದೆಂಬ ತೀರ್ಮಾನಕ್ಕೆ ಬಂದಿತ್ತು. ಆದರೆ ಕನಿಷ್ಠ ವೇತನ ಹೆಚ್ಚು ಮಾಡುವುದಾಗಲೀ, ತುಟ್ಟಿಭತ್ಯದ ಅಂಕಿ-ಹೊಂದಾಣಿಕೆ ಅಂಶ ಹೆಚ್ಚು ಮಾಡಬಾರದೆಂಬ ತೀರ್ಮಾನವನ್ನೂ ನೀಡಿತ್ತು. ಆಗ ಕನಿಷ್ಠ ವೇತನದಲ್ಲಿ ಐದು (5)ರೂ. ಮಾತ್ರ ಹೆಚ್ಚಳವನ್ನು ನೀಡಲಾಯಿತು.

1976 ಡಿಸೆಂಬರ್ 31ರಂದು ಕೊನೆಯಾದ ಒಪ್ಪಂದದಲ್ಲಿ ಕನಿಷ್ಟ ವೇತನ ಕೆಳಗಿನಂತೆ ಇತ್ತು. 1973 ಅಕ್ಟೋಬರ್ ತಿಂಗಳಲ್ಲಿದ್ದ 241 ಸೂಚ್ಯಂಕಕ್ಕೆ ತುಟ್ಟಿಭತ್ಯ ರೂ. 100 ಮತ್ತು ಮೂಲ ವೇತನ ರೂ. 205 ಸೇರಿ ಒಟ್ಟು ರೂ. 305. ಇದು 1977 ಜನವರಿ ಒಂದರಂದು ಸೂಚ್ಯಂಕ ರೂ. 314ಗೆ ತುಟ್ಟಿಭತ್ಯ ರೂ. 195 ಮತ್ತು ಸಂಬಳ ರೂ. 205 ಸೇರಿ ಒಟ್ಟು ರೂ. 395 ಇತ್ತು. ಇದಕ್ಕೆ ಐದು (5) ರೂ. ಸೇರಿಸಿ ರೂ. 400 ಕನಿಷ್ಟ ವೇತನವೇ ಈಗ ಕೊಡುತ್ತಿರುವುದು. ಈ ಕನಿಷ್ಟ ವೇತನ ರೂ. 395 ಮೂಲ ವೇತನ ಮತ್ತು ರೂ. 95 ತುಟ್ಟಿಭತ್ಯವನ್ನು ಒಳಗೊಂಡಿತ್ತು. ಹೈದರಾಬಾದ್‌ನ ಸಮ್ಮೇಳನ ಆದ ಮೇಲೆ ಕನಿಷ್ಟ ವೇತನ ಮತ್ತು ತುಟ್ಟಿಭತ್ಯ ಅಂಕಿ ಹೊಂದಾಣಿಕೆ ಅಂಶದಲ್ಲಿ ಹೆಚ್ಚಳ ಆಗಬೇಕಾದರೆ ಮತ್ತು ಭೂತಲಿಂಗಂ ಪ್ಯಾನಲನ್ನು ಕಡೆಗಣಿಸಬೇಕಾದರೆ, ಕೇಂದ್ರದ ಜನತಾ ಸರಕಾರದ ಧೋರಣೆಯಲ್ಲಿ ಬದಲಾವಣೆಯಾಗಬೇಕಾಗಿದ್ದುದು ಅವಶ್ಯವಿತ್ತು. ಕಾರಣ ಅಖಿಲಭಾರತ ಮಟ್ಟದಲ್ಲಿ ಸಾರ್ವಜನಿಕ ಕ್ಷೇತ್ರದಲ್ಲಿರುವ ಕಾರ್ಮಿಕರ ಹೋರಾಟ ನಡೆಯಬೇಕೆಂದು ಪರಿಗಣಿಸಿ, 1978 ಮೇ 15ರಂದು ದೆಹಲಿಯಲ್ಲಿ ಈ ಕಾರ್ಮಿಕರ ಸಮ್ಮೇಳನವನ್ನು ಕರೆಯಲಾಗಿತ್ತು. ಈ ಸಮ್ಮೇಳನದ ನಾಲ್ಕು ದಿನ ಮೊದಲೇ ಬೆಂಗಳೂರಿನ ಈ ಕ್ಷೇತ್ರಗಳ ಕಾರ್ಮಿಕರ ಸಮ್ಮೇಳನ ಸೇರಿ ಅದೇ ತಿಂಗಳು 25ರಿಂದ ಅನಿರ್ದಿಷ್ಟ ಕಾಲದ ಮುಷ್ಕರಕ್ಕೆ ಕರೆ ನೀಡಲಾಗಿತ್ತು.

ದೆಹಲಿ ಸಮ್ಮೇಳನದಲ್ಲಿ ಬೆಂಗಳೂರು ಕಾರ್ಮಿಕರ ಮುಷ್ಕರದ ತೀರ್ಮಾನವನ್ನು ಒಪ್ಪಲು ಸಾಧ್ಯವಾಗಲಿಲ್ಲ. ಕೇಂದ್ರದ ಜನತಾ ಸರಕಾರದ ಧೋರಣೆ ಬದಲಾಯಿಸುವಂತೆ ಒತ್ತಾಯಿಸಲು ಜೂನ್ 28ರಂದು ಅಖಿಲಭಾರತ ಮಟ್ಟದಲ್ಲಿ ಒಂದು ದಿವಸದ ಮುಷ್ಕರದ ತೀರ್ಮಾನವನ್ನು ಈ ಸಮ್ಮೇಳನ ಕೈಗೊಂಡಿತ್ತು. ಬೆಂಗಳೂರಿನ ಕಾರ್ಮಿಕರೂ ಅಖಿಲ ಭಾರತ ಮಟ್ಟದಲ್ಲಿ ನಡೆಯುವ ಹೋರಾಟದಲ್ಲಿ ಪಾಲ್ಗೊಳ್ಳುವಂತೆ ಮಾಡಲು ಆ ಸಮ್ಮೇಳನ ಕಾಂ. ಪಿ. ರಾಮಮೂರ್ತಿಯವರನ್ನು ಬೆಂಗಳೂರಿಗೆ ಕಳಿಸಿಕೊಟ್ಟಿತು. ಆ ಪ್ರಕಾರ ಕಾಂ. ಪಿ. ರಾಮಮೂರ್ತಿಯವರು ಬೆಂಗಳೂರಿಗೆ ಬಂದು, ಮುಷ್ಕರವನ್ನು ಕೇವಲ ತಾತ್ಕಾಲಿಕ ಪರಿಹಾರಕ್ಕಾಗಿ ನಡೆಸಬೇಕೆಂದೂ, ವೇತನದ ಬಗ್ಗೆ ಒಪ್ಪಂದಕ್ಕೆ ಬರಬಾರದೆಂದೂ ಸಲಹೆ ನೀಡಿದರು. ಆದರೆ ಮೇ 24-25ರ (ಮೇ) ರಾತ್ರಿ ಕಾರ್ಮಿಕರು ಮುಷ್ಕರಕ್ಕೆ ಸಿದ್ಧತೆ ನಡೆಸುತ್ತಿದ್ದಂತೇ, ಕೇವಲ 5 ರೂ. ಮಾತ್ರ ಕನಿಷ್ಠ ವೇತನದಲ್ಲಿ ಹೆಚ್ಚಳ ಆಗಿದ್ದಂಥಹ ಒಪ್ಪಂದಕ್ಕೆ ರುಜು ಹಾಕಲಾಯಿತು. ಈ ಒಪ್ಪಂದದಲ್ಲಿ ಆಗ ಸರ್ವಿಸಿನಲ್ಲಿದ್ದ ಕಾರ್ಮಿಕರಿಗೆ ರೂ. 40ನ್ನು ಹೆಚ್ಚಳವನ್ನೂ ನೀಡಲಾಗಿತ್ತು. ಇದಕ್ಕೆ ಫಿಟ್‌ಮೆಂಟ್ ಬೆನಿಫಿಟ್ ಎಂದು ಹೇಳಲಾಯಿತು. ಆದರೆ ರೂ. 395ರಿಂದ ರೂ. 400 ಗಳಿಗೆ ಸಂಬಳ ಏರಿಕೆ ಆದಾಗ ಫಿಟ್‌ಮೆಂಟಿನ ಸಮಸ್ಯೆಯೇ ಬರುವುದಿಲ್ಲವಾದ ಕಾರಣ ಇದನ್ನು ಅಡ್‌ಹಾಕ್ ಹೆಚ್ಚಳವಾಗಿಯೇ ಪರಿಗಣಿಸಬೇಕಾಗಿದೆ. ಮೇ 24-25, 1978ರ ಒಪ್ಪಂದ ಆದಾಗ ಸಂಬಳದ ಸಮಸ್ಯೆ ಅಲ್ಲದಿದ್ದ ಬೇರೆ ಸಮಸ್ಯೆಗಳ ಬಗ್ಗೆ ಮೂರು ತಿಂಗಳುಗಳಲ್ಲಿ ಮಾತುಕತೆ ನಡೆಸಬೇಕೆಂದೂ ನಿರ್ಧರಿಸಲಾಗಿತ್ತು. ಅಲ್ಲದೇ ಕನಿಷ್ಠ ವೇತನ ಮತ್ತು ತುಟ್ಟಿಭತ್ಯ ಅಂಕಿ ಹೊಂದಾಣಿಕೆ ಹೆಚ್ಚಳದ ವಿಷಯಕ್ಕಾಗಿ ಕೇಂದ್ರ ಸರಕಾರವನ್ನು ಕೇಳುವ ಅವಕಾಶ ಕಾರ್ಮಿಕ ಸಂಘಟನೆಗಳಿಗೆ ಇರುವ ಅಂಶವನ್ನು ಒಪ್ಪಂದ ಒಳಗೊಂಡಿತ್ತು.

ದೆಹಲಿ ಸಮಾವೇಶದ ಕರೆಯ ಅನುಸಾರವಾಗಿ 1978 ಜೂನ್ 28ರಂದು ಬೆಂಗಳೂರಿನ ಕಾರ್ಮಿಕರೂ ಸೇರಿದಂತೆ ಸಿದ್ಧತೆ ನಡೆದಿತ್ತು. ಆದರೆ ಜೂನ್ 26, 1978ರಂದು ದೆಹಲಿಯಲ್ಲಿ ನಡೆದ ಮಾತುಕತೆಯಲ್ಲಿ ಕೇಂದ್ರ ಸರಕಾರವು ತನ್ನ ನಿಲುವನ್ನು ಬದಲಾಯಿಸಿದ್ದರಿಂದ ಜೂನ್ 28ರ ಮುಷ್ಕರ ನಡೆಯಲಿಲ್ಲ.

ಬ್ಯೂರೋ ಆಫ್ ಪಬ್ಲಿಕ್ ಎಂಟರ್‌ಪ್ರೈಸಸ್‌ರವರು, ಕಾರ್ಮಿಕರೂ ಮತ್ತು ಅಧಿಕಾರಿವರ್ಗದ ಮಾತುಕತೆಯಲ್ಲಿ ಮಧ್ಯ ಪ್ರವೇಶ ಮಾಡುವುದಿಲ್ಲವೆಂದೂ, ಉಭಯ ಪಕ್ಷಗಳೂ ಸ್ವತಂತ್ರವಾಗಿ ಸಾಮೂಹಿಕ ಚೌಕಾಶಿ ನಡೆಸಬಹುದೆಂದೂ ಕೇಂದ್ರ ಸರಕಾರದ ಮಂತ್ರಿಗಳು ಕೇಂದ್ರ ಕಾರ್ಮಿಕ ಸಂಘಗಳ ನಾಯಕರ ಮುಂದೆ ಒಪ್ಪಿದುದೇ ಜೂನ್ 26ರ ತೀರ್ಮಾನ. ಅಲ್ಲದೇ ಎಲ್ಲಾ ಕಾರ್ಖಾನೆಗಳಲ್ಲೂ ಸಂಬಳ ನಿಗದಿ ಮಾಡುವ ಕೆಲವು ಮೂಲಭೂತ ಧೋರಣೆಗಳ ಬಗ್ಗೆ ಮಾರ್ಗದರ್ಶನ ನೀಡಬಹುದೆಂದು ಈ ಮಾರ್ಗದರ್ಶನ ಹೇಗಿರಬೇಕೆಂಬುದು ಕೇಂದ್ರ ಕಾರ್ಮಿಕ ಸಂಘಗಳ ನಾಯಕರೂ ಮತ್ತು ಕೇಂದ್ರ ಸರಕಾರದ ಅಧಿಕಾರಿಗಳೂ ಸೇರಿ ತೀರ್ಮಾನ ಮಾಡಬೇಕಿತ್ತು. ಇದಕ್ಕಾಗಿ 1978 ಸೆಪ್ಟೆಂಬರ್ 1ರಂದು ಸಭೆ ಸೇರುವುದಕ್ಕೆ ಮೊದಲು ಕೆಲವು ಘಟನೆಗಳು ನಡೆದವು.

ಜೂನ್ 26, 1978ರ ತೀರ್ಮಾನದ ಪ್ರಕಾರ ಬಿ. ಎಚ್. ಇ. ಎಲ್. ಕಾರ್ಖಾನೆಗಳಲ್ಲಿ ಬಿ.ಪಿ.ಇ. ಮಧ್ಯ ಪ್ರವೇಶಿಸದೆ ಸಾಮೂಹಿಕ ಚೌಕಾಶಿ ಮೂಲಕ 78 ಜೂನ್ 30 ಮತ್ತು ಜುಲೈ 1ರಂದು ನಡೆಸಿದ ಮಾತುಕತೆಯಲ್ಲಿ ಕಾಂ. ರಾಮಮೂರ್ತಿಯವರೇ ಸ್ವತಃ ಭಾಗವಹಿಸಿ ಬಿ.ಎಚ್.ಇ.ಎಲ್. ಕಾರ್ಮಿಕರಿಗೆ ಅವರ ಸಂಬಳದಲ್ಲಿ ಶೇ. 10ರಷ್ಟು ತಾತ್ಕಾಲಿಕ ಪರಿಹಾರ ಕೊಡಬೇಕೆಂದೂ ಮೇಲೆ ವಿವರಿಸಿದ 'ಮಾರ್ಗದರ್ಶನ' ಬಂದ ಮೇಲೆ ಕೊನೆಯ ಒಪ್ಪಂದ ಆಗಬೇಕೆಂದೂ ತೀರ್ಮಾನವಾಯಿತು.

ಮೇಲೆ ವಿವರಿಸಿದ 'ಮಾರ್ಗದರ್ಶನಗಳು' ಬಂದ ಮೇಲೆ ಒಪ್ಪಂದ ಮಾಡುವ ಬದಲು ಮೇ 25ರಂದೇ ಮಾಡಿರುವಂತಹ ಒಪ್ಪಂದ ಪುನಃ ಮಾಡದೇ ಮೊದಲು ರುಜುವಾದ ಒಪ್ಪಂದದ ಪ್ರಕಾರ ಕಾರ್ಮಿಕರಿಗೆ ಕೊಡಬೇಕಿರುವ ಹೆಚ್ಚುವರಿ ಸಂಬಳ ಕೊಡುವುದಿಲ್ಲವೆಂದು ಬೆಂಗಳೂರಿನ ಕಾರ್ಖಾನೆಗಳ ಆಡಳಿತ ವರ್ಗದವರು, 1978ರ ಜುಲೈ-ಆಗಸ್ಟ್ ತಿಂಗಳಲ್ಲಿ, ಒತ್ತಾಯ ಮಾಡಿದರು. ಹೆಚ್ಚುವರಿ ಸಂಬಳ ಪಡೆಯುವದಕ್ಕೆ ಇನ್ನೊಂದು ಒಪ್ಪಂದ ಆಗಬೇಕಾದರೆ 'ಮಾರ್ಗದರ್ಶನಗಳ' ಯಾವವು ಎಂದು ತೀರ್ಮಾನ ಆಗಬೇಕೆಂದು, ಆದುದರಿಂದ ಹೆಚ್ಚುವರಿ ಸಂಬಳ ಕೂಡಲೇ ಕೊಡಬೇಕು ಅಥವಾ ತಾತ್ಕಾಲಿಕ ಪರಿಹಾರಕೊಡಬೇಕೆಂದು ಬೆಂಗಳೂರಿನ ಕಾರ್ಮಿಕರನ್ನು ಹೋರಾಟದಲ್ಲಿ ಪಾಲ್ಗೊಳ್ಳುವಂತೆ ಮಾಡುವದೇ ಸರಿ ಎಂದು ಸಿ ಐ ಟಿ ಯು ಹೇಳಿದ್ದಿತು. ಆದರೆ 1-9-78 ರಂದು ದೆಹಲಿಯಲ್ಲಿ 'ಮಾರ್ಗದರ್ಶನ'ಗಳು ತೀರ್ಮಾನ ಮಾಡುವದಕ್ಕೆ ಸಭೆ ನಡೆಯಲಿರುವಾಗಲೇ 27-8-78 ರಂದು ಒಂದು ದಿನದ ಸಾಂಕೇತಿಕ ಮುಷ್ಕರಕ್ಕೆ ಬೆಂಗಳೂರಿನ ಕಾರ್ಮಿಕರನ್ನು ಇಳಿಸಲಾಯಿತು. ಈ ಸಾಂಕೇತಿಕ ಮುಷ್ಕರದ ಬೇಡಿಕೆಯೂ ವಿಚಿತ್ರವಾದಿಯೇ ಇದ್ದಿತು. ಈಗಾಗಲೇ ಬರುವ ತುಟ್ಟಿಭತ್ಯೆಯಲ್ಲಿ, ತುಟ್ಟಿಭತ್ಯೆ ರೂ 135/- ಕಡಿತ ಆಗದ ತುಟ್ಟಿಭತ್ಯ ಆಗಬೇಕೆಂಬುದೇ ಈ ಬೇಡಿಕೆ. ಅಂದರೆ ಕನಿಷ್ಠ ವೇತನವನ್ನು ಹೆಚ್ಚು ಮಾಡುವದರಲ್ಲಾಗಲೀ, ತುಟ್ಟಿಭತ್ಯದ ಅಂಕಿ ಹೊಂದಾಣಿಕೆಯ ಅಂಶ ಹೆಚ್ಚು ಮಾಡುವುದಕ್ಕಾಗಲೀ ಕೇಳಲಿಲ್ಲ ಎಂಬುದೇ ಈ ಬೇಡಿಕೆ ಮತ್ತು 27-8-78ರ ಮುಷ್ಕರದ ವೈಚಿತ್ರ್ಯ. ಈ ಮುಷ್ಕರ ಆದ ಮೇಲೆಯೂ ಆಗಬಾರದಿದ್ದ ಒಪ್ಪಂದ ಆಗದಿದ್ದ ಕಾರಣಕ್ಕೆ ಎಂದು ಯೂನಿಯನ್‌ನವರು ಲೇಬರ ಕಮೀಷನರ್ ಆಫೀಸಿನಲ್ಲಿ ಧರಣಿ ಮಾಡಿ ತುಟ್ಟಿಭತ್ಯ 1-9-78ರಂದು ರೂ 124-80 ಕಡಿತವಾಗದ ತುಟ್ಟಿಭತ್ಯ ಆಗಬೇಕೆಂದು ಮಾತ್ರ ಸೇರಿಸಿ ಹಳೆಯ ಅಂದರೆ 25-5-78ರ ಒಪ್ಪಂದ ಮತ್ತೊಮ್ಮೆ ಮಾಡಿದರು. ಕಡಿತವಾಗದ ತುಟ್ಟಿಭತ್ಯ ರೂ. 124-80 337 ಸೂಚ್ಯಂಕಕ್ಕೆ ಇದ್ದದ್ದು ಆದರೆ 1-9-78ರಂದು ಇದ್ದ 333 ಸೂಚ್ಯಂಕಕ್ಕೂ ಅದೇ ತುಟ್ಟಿಭತ್ಯ ಸಿಗುತ್ತಿತ್ತು. ಸೆಪ್ಟೆಂಬರ್ 78ರ ಬೆಂಗಳೂರು ಒಪ್ಪಂದ ಮಾಡುವ ಮೂಲಕ ಮತ್ತೊಮ್ಮೆ ಕಾರ್ಮಿಕರ ಅಖಿಲ ಭಾರತ ಮಟ್ಟದ ಹೋರಾಟ ಬರಲು ಸಾಧ್ಯವಾಗಲಿಲ್ಲ. ಈ ಒಪ್ಪಂದದಲ್ಲಿ ಕನಿಷ್ಠ ವೇತನ, ತುಟ್ಟಿಭತ್ಯ ಹೊಂದಾಣಿಕೆ ಸೂಚ್ಯಂಕ ಬೇರೆ ಯಾವ ಕಾರ್ಖಾನೆಯಲ್ಲಾದರೂ (ಉದಾ-ಬಿ.ಎಚ್.ಇ.ಎಲ್.) ಹೆಚ್ಚು ಮಾಡಿದರೆ ಅಷ್ಟೇ ಬೆಂಗಳೂರಿನ ಬಿ.ಇ.ಎಲ್., ಎಚ್.ಎ.ಎಲ್., ಬಿ.ಇ.ಎಂ.ಎಲ್., ಕಾರ್ಖಾನೆಗಳಲ್ಲಿಯೂ ಕೊಡುತ್ತೇವೆಂದು ಬರೆದಿತ್ತು.

ಕೇಂದ್ರ ಸರಕಾರದ ಧೋರಣೆಯಲ್ಲಿ ಮೂಲಭೂತ ವ್ಯತ್ಯಾಸ ತರುವುದಕ್ಕಾಗಿ ಸಿ.ಐ.ಟಿ.ಯು.ಗೆ ಸೇರಿದಂತಹ, ಹಿಂದುಸ್ತಾನ ಟೆಲಿಪ್ರಿಂಟರ್ಸ್ ಮದ್ರಾಸ್ ಮತ್ತಿತರ ಸಂಘಗಳು ದೀರ್ಘಕಾಲದ ಹೋರಾಟ ನಡೆಸಬೇಕಾಗಿ ಬಂದಿತು. ಭಾರೀ ಹೋರಾಟಗಳನ್ನು ನಡೆಸಿದ ಫಲವಾಗಿ 80ರ ಜನವರಿ 8-9ರಂದು ಬೊಂಬಾಯಿಯಲ್ಲಿ ನಡೆದ ಬಿ. ಎಚ್. ಇ. ಎಲ್. ಮಾತುಕತೆಯಲ್ಲಿ ಕನಿಷ್ಠ ವೇತನವನ್ನು 1-9-78ರಿಂದ ರೂ. 500 ಮಾಡುವ ಒಪ್ಪಂದಕ್ಕೆ ರುಜು ಹಾಕಲಾಯಿತು.

ಬಿ.ಎಚ್.ಇ.ಎಲ್. ಕಾರ್ಖಾನೆಗಳಲ್ಲಿ ಈ ಒಪ್ಪಂದ ಆಗುವ ಮುಂಚೆ ಇದ್ದ ಕನಿಷ್ಠ ವೇತನ ರೂ. 425-90 ಪೈ ಇತ್ತು. ಇದು ರೂ. 260 ಮೂಲ ವೇತನ ಮತ್ತು 327 ಸೂಚ್ಯಂಕಕ್ಕೆ 165.90ಪೈ. ತುಟ್ಟಿಭತ್ಯ ಇತ್ತು. ಈಗ ಮೂಲವೇತನ ರೂ. 335 ಆಗಿ ಮಾಡಿತ್ತು. ಕಡಿತವಾಗದ ತುಟ್ಟಿಭತ್ಯ 300 ಸೂಚ್ಯಂಕಕ್ಕೆ ರೂ. 129.90 ಪೈ. ಮತ್ತು ಉಳಿದ 27 ಸೂಚ್ಯಂಕಕ್ಕೆ ರೂ. 1.30 ಪೈ. ಪ್ರಕಾರ ರೂ. 35.10 ಪೈ ಸೇರಿ ಒಟ್ಟು ರೂ. 500/- ಕನಿಷ್ಠ ವೇತನ ಆಗುತ್ತದೆ.

ಬೆಂಗಳೂರು ಆಧಾರವಾಗಿರುವ ಕಾರ್ಖಾನೆಗಳಲ್ಲಿ ಈ ಕನಿಷ್ಠ ವೇತನ ಆಗಬೇಕೆಂಬುದೇ ಈಗ ನಡೆಯುತ್ತಿರುವ ಹೋರಾಟದ ಕಾರಣ. ಆದರೆ ತಮ್ಮ ಬೇಡಿಕೆಯನ್ನು ಸ್ಪಷ್ಟವಾಗಿ ಇಡುವುದರಲ್ಲಿ ಹಲವಾರು ಕಾರ್ಮಿಕ ಸಂಘಗಳು ಹಲವಾರು ರೀತಿಯನ್ನು ಕೈಕೊಂಡು ವ್ಯತ್ಯಸ್ಥವಾದ ಬೇಡಿಕೆಗಳನ್ನು ಇಟ್ಟಿದ್ದಾರೆ. ಬೆಂಗಳೂರಿನ ಹೆಚ್ಚು ಸಂಘಗಳು ಒಟ್ಟು ಸೇರಿ ಮಾಡಿದಂಥಹ ಜಾಯಿಂಟ ಆ್ಯಕ್ಷನ್ ಫ್ರಂಟ್ (ಸಂಯುಕ್ತ ಕ್ರಿಯಾ ವೇದಿಕೆ)ನವರು ಮೂಲವೇತನದಲ್ಲಿ ರೂ 30/- ತುಟ್ಟಿಭತ್ಯದಲ್ಲಿ ರೂ. 5/- ಮತ್ತು ಸಿ.ಪಿ.ಎ. ಸಮೇತ ಕೊಡಬೇಕೆಂದು ಬೇಡಿಕೆ ಇಟ್ಟಿದ್ದಾರೆ. ಬಿ.ಎಂ.ಎಸ್.ಗೆ ಸೇರಿದಂಥಹ ಸಂಘಗಳು 1-9-78 ರಂದು ಮತ್ತು 1-1-77ರಂದು ವ್ಯತ್ಯಾಸವಾದ ಸೂಚ್ಯಂಕಗಳು ಇದ್ದದು ಗಮನಿಸದೆ ಪ್ರಾಥಮಿಕ ಶಾಲೆ ಹುಡುಗರ ರೀತಿ ಬಿ.ಎಚ್.ಇ.ಎಲ್. 1-9-78 ಕನಿಷ್ಠ ವೇತನ ರೂ. 500+ ರೂ. 8 ಒಂದು ಇನ್‌ಕ್ರಿಮೆಂಟ್ ಸೇರಿ ರೂ. 508 ನಿಂದ ರೂ. 400 ಬಿ. ಇ. ಎಲ್. 1-1-77ರ ಕನಿಷ್ಟ ವೇತನವನ್ನು ಕಮ್ಮಿ ಮಾಡಿ ರೂ. 108/- ಕೊಡಬೇಕೆಂದು ಬೇಡಿಕೆ ಇಟ್ಟಿದ್ದಾರೆ.

(ಕಡೇ ಪುಟ ನೋಡಿ)

REG. KRN8-368   MAG (2) PRB DECR 319/78-78

ಪಕ್ಷದ ಸಂಘಟನೆಯನ್ನು ಬಲಪಡಿಸಿ, ಜನತೆಯ ಹೋರಾಟಗಳನ್ನು ಬೆಳೆಸಲು ಪ್ಲೀನಮ್ ಕರೆ

(1ನೇ ಪುಟದಿಂದ)

ಪಾರ್ಟಿಯೂ ಅಲ್ಲ; ಅಥವಾ ಬರೇ ಕ್ರಾಂತಿಕಾರಿ ಪಾರ್ಟಿಯೂ ಅಲ್ಲ. ಇದು ಕ್ರಾಂತಿಕಾರಿ ಶಿಸ್ತಿನಿಂದೊಡಗೂಡಿದ ಸಾಮೂಹಿಕ ಕ್ರಾಂತಿಕಾರಿ ಪಕ್ಷ. ಪಕ್ಷದೊಳಗಿನ ಪ್ರಜಾಪ್ರಭುತ್ವದ ಆಧಾರದಲ್ಲಿ ಕೇಂದ್ರೀಕೃತ ಪ್ರಜಾಪ್ರಭುತ್ವ ನಿಯಮಗಳನ್ನು ಉಕ್ಕಿನ ಶಿಸ್ತಿನಿಂದ ಪಾಲಿಸುವ ಸದಸ್ಯತ್ವದಿಂದ ಕೂಡಿದ ಪಕ್ಷ. ಸದಸ್ಯತ್ವವನ್ನು ಹೆಚ್ಚಿಸುವುದೆಂದರೆ, ಪಕ್ಷವನ್ನು ಪಸರಿಸುವುದೆಂದರೆ ಕ್ರಾಂತಿಕಾರಿ ತಿರುಳನ್ನು, ಸತ್ವವನ್ನು ಕಡಮೆ ಮಾಡುವುದೆಂದರ್ಥವಲ್ಲ ಬದಲು ಕ್ರಾಂತಿಕಾರಿ ಸಂಘಟನಾ ನಿಯಮ ಮತ್ತು ತತ್ವಗಳನ್ನು ನಿಷ್ಠೆಯಿಂದ ಪಾಲಿಸುವ ಆಧಾರದಲ್ಲಿ ಸದಸ್ಯರು ಸಂಖ್ಯೆಯಲ್ಲಿ ಸದಸ್ಯತ್ವವನ್ನು ಸೇರಿಸಬೇಕು. ಇವೆಲ್ಲವನ್ನೂ ನಿಮ್ಮ ಅನುಭವಗಳ ಆಧಾರದಲ್ಲಿ ಚರ್ಚಿಸುವಿರಾಗಿ ನಂಬುತ್ತೇನೆ ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಕಾಂ. ಇ. ಎಮ್. ಎಸ್. ನಂಬೂದಿರಿಪಾದ್ ಅವರು 25-12-80ರಂದು ಬೆಳಗ್ಗೆ 9ಕ್ಕೆ ಪ್ರಾರಂಭವಾದ ಪ್ರತಿನಿಧಿ ಸಭೆಯುನ್ನುದ್ದೇಶಿಸಿ ಹೇಳಿದರು.

ಕಾಂ. ಸಿ. ನಂಜುಂಡಪ್ಪ, ಕಾಂ. ವಿ. ಜೆ. ಕೆ. ನಾಯರ್, ಕಾಂ. ಕೆ. ರಂಗಪ್ಪ ಶ್ರೀಯಾನ್, ಕಾಂ. ಸವರಿ ದಾಸ್ ಮತ್ತು ಕಾಂ. ಮಹಮದ್ ದಸ್ತಗೀರ್-ಈ ಐದು ಸದಸ್ಯರ ಅಧ್ಯಕ್ಷ ಮಂಡಳಿ ಆಯ್ಕೆಯಾಗಿ ಆಸನ ಸ್ವೀಕರಿಸುವುದರೊಂದಿಗೆ ಪ್ರತಿನಿಧಿ ಸಭೆಯು ಪ್ರಾರಂಭವಾಯಿತು. ಕಾಂ. ಇ. ಎಮ್. ಎಸ್.ರವರ ಭಾಷಣಕ್ಕೆ ಮೊದಲು ಹುತಾತ್ಮರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಲಾಯ್ತು. ರಾಜ್ಯದ ಹದಿನೇಳು ಜಿಲ್ಲೆಗಳನ್ನು ಪ್ರತಿನಿಧೀಕರಿಸಿ 104 ಮಂದಿ ಪ್ರತಿನಿಧಿಗಳು ಭಾಗವಹಿಸಿದ್ದರು.

25-12-80ರಂದು ಮಧ್ಯಾಹ್ನದ ಮೇಲೆ ಪಕ್ಷದ ರಾಜ್ಯಸಮಿತಿ ಕಾರ್ಯದರ್ಶಿಯವರು ರಾಜ್ಯಸಮಿತಿಯ ಪರವಾಗಿ ಸಂಘಟನಾ ಕರಡು ವರದಿಯನ್ನು ಮಂಡಿಸಿದರು. ಎರಡು ವರ್ಷಗಳ ಹಿಂದೆ ನಡೆದಿರುವ ಪಕ್ಷದ ಅಖಿಲಭಾರತ ಪ್ಲೀನಮ್ ಸಭೆಯಲ್ಲಿ ಹೇಳಿರುವ ಸಂಘಟನಾ ನಿಷ್ಕ್ರಿಯತೆಯಷ್ಟೇ ಅಲ್ಲದೆ, ಕರ್ನಾಟಕ ರಾಜ್ಯದಲ್ಲಿ ಹಿಂದಿನ ರಾಜ್ಯಸಮಿತಿಯ ಪ್ರಮುಖ ವಿಭಾಗವು ಅನುಸರಿಸಿದ ತಪ್ಪು ನೀತಿಗಳ ಪರಿಣಾಮವಾಗಿ ಇನ್ನೂ ಕೆಲವು ವಿಶಿಷ್ಟ ಸಮಸ್ಯೆಗಳೂ ಸೇರಿಕೊಂಡಿವೆ. ಜುಲೈ 1978ರಲ್ಲಿ ಪಕ್ಷದ ರಾಜ್ಯಸಮಿತಿಯು ಪುನರ್ಘಟಿಸಲ್ಪಟ್ಟ ಮೇಲೆ, ಕಳೆದ 28 ತಿಂಗಳುಗಳಲ್ಲಿ, ನಡೆಸಿರುವ ಹೋರಾಟ, ಗಳಿಸಿರುವ ಸಾಧನೆಗಳ ಬಗ್ಗೆ ನಾವು ಹೆಮ್ಮೆಪಡಬೇಕಾದರೂ, ಇನ್ನೂ ಮಾಡಬೇಕಾದ ಕೆಲಸಗಳು ಬಹಳಷ್ಟಿವೆ. ಹಿಂದೆ ಅನುಸರಿಸಿಕೊಂಡು ಬಂದ ಕೆಲವು ತಪ್ಪು ಸಂಘಟನಾ ಕ್ರಮಗಳು ನಮ್ಮನ್ನು ಇನ್ನೂ ಬಾಧಿಸುತ್ತಿವೆ. ಹೊಸ ಅವಕಾಶಗಳನ್ನು ಉಪಯೋಗಿಸಿಕೊಂಡು ಪಕ್ಷವನ್ನು ದೊಡ್ಡ ರೀತಿಯಲ್ಲಿ ವಿಶಾಲಗೊಳಿಸಬೇಕಾದರೆ ಮತ್ತು ಇರುವೆಡೆ ಗಟ್ಟಿಗೊಳಿಸಬೇಕಾದರೆ, ಮೊದಲಾಗಿ ನಮ್ಮ ನಿಷ್ಕ್ರಿಯತೆಯನ್ನು ಹೋಗಲಾಡಿಸಬೇಕು. ಈ ದಿಸೆಯಲ್ಲಿ ನಮ್ಮ ಚರ್ಚೆಯು ಮುಂದುವರಿಯಲಿ ಎಂದು ವರದಿಯನ್ನು ಮಂಡಿಸುತ್ತಾ ಹೇಳಿದರು ಕಾಂ. ಎಂ. ಕೆ. ಭಟ್.

26 ಮತ್ತು 27ರಂದು ಪೂರ್ಣವಾಗಿ ಚರ್ಚೆಗೆ ಸಮಯವನ್ನು ವಿಸಿಲಾಗಿಡಲಾಗಿತ್ತು. ಒಟ್ಟು ಸುಮಾರು 35ಮಂದಿ ಚರ್ಚೆಯಲ್ಲಿ ಭಾಗವಹಿಸಿದ್ದರು. ಚರ್ಚೆಯಲ್ಲಿ ಭಾಗವಹಿಸಿದ್ದವರೆಲ್ಲರೂ ವರದಿಯನ್ನು ಇನ್ನೂ ಉತ್ತಮಗೊಳಿಸುವುದಕ್ಕೆ ಕೆಲವು ಸೂಚನೆಗಳನ್ನು ಕೊಟ್ಟರು. ವರದಿಯಲ್ಲಿ ಕೆಲವೊಂದು ಲೋಪದೋಷಗಳಿರುವುದಾದರೂ, ಒಟ್ಟಾಗಿ ಹೇಳುವುದಿದ್ದರೆ ವರದಿಯು ಉತ್ತಮವಾಗಿದೆ ಮತ್ತು ಸರಿಯಾದ ದೃಷ್ಟಿಕೋಣವನ್ನು ಕೊಡುತ್ತಿದೆ ಎಂದ ಪ್ರತಿನಿಧಿಗಳು, ವರದಿಯನ್ನು ಸ್ವಾಗತಿಸಿದರು. ಮಾತನಾಡಿದವರೆಲ್ಲಾ ಟೀಕೆ ಮತ್ತು ಸ್ವಯಂ ಟೀಕೆಯ ಸ್ಫೂರ್ತಿಯಲ್ಲಿ ರಾಜ್ಯ ಸಮಿತಿಯ ಕೆಲಸ ಕಾರ್ಯಗಳಲ್ಲಿರುವ ನ್ಯೂನತೆಗಳನ್ನು ಎತ್ತಿ ತೋರಿಸಿದರು. ತಮ್ಮ ತಮ್ಮ ಅನುಭವದ ಆಧಾರದಲ್ಲಿ ಮತ್ತು ಸ್ಫೂರ್ತಿಯಿಂದ ನಡೆಸುತ್ತಿದ್ದ ಚರ್ಚೆಯು ಒಂದು ಹೊಸ ಅನುಭವವಾಗಿತ್ತು.

ಪ್ಲೀನಮ್‌ನ ಕಾರ್ಯಕಲಾಪಗಳಲ್ಲಿ ಎರಡು ದಿನ, ಅಂದರೆ 26 ಮತ್ತು 27ರಂದು ಭಾಗವಹಿಸಿದ್ದ ಪಕ್ಷದ ಪೊಲಿಟ್‌ಬ್ಯೂರೋ ಸದಸ್ಯ ಕಾಂ. ಪಿ. ರಾಮಮೂರ್ತಿಯವರು 27ರಂದು ಬೆಳಗ್ಗೆ ಪ್ರತಿನಿಧಿಗಳನ್ನುದ್ದೇಶಿಸಿ ಮಾತನಾಡಿದರು. ಕರ್ನಾಟಕ ರಾಜ್ಯದಲ್ಲಿ ಪಕ್ಷದ ರಾಜ್ಯಸಮಿತಿಯನ್ನು ಪುನರ್ಘಟಿಸಬೇಕಾಗಿ ಬಂದಿದ್ದ ಹಿನ್ನೆಲೆಯನ್ನು ನೆನಪಿಗೆ ತಂದುಕೊಂಡು, ಇತ್ತೀಚಿನ ಬೆಳವಣಿಗೆಯು ಪೊಲಿಟ್‌ಬ್ಯೂರೋ ಮಧ್ಯಪ್ರವೇಶಿಸಿದ್ದು ಸರಿ ಎಂದು ತೋರಿಸಿಕೊಟ್ಟಿದೆ ಎಂದರು ಕಾಂ. ಪಿ. ಆರ್. ಕಾರ್ಮಿಕ ವರ್ಗದ, ಜನತೆಯ ಹೋರಾಟಗಳು ಬೆಳೆದಂತೆ, ಇದು ಪಕ್ಷದ ಸಂಘಟನೆಯನ್ನು ವಿಶಾಲಗೊಳಿಸುವುದರಲ್ಲೂ ಪ್ರತಿಫಲನಗೊಳ್ಳಬೇಕು ಎಂದ ಪಿ. ಆರ್. ಅವರು ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳೊಳಗಿರುವ ವ್ಯತ್ಯಾಸವನ್ನು ಮತ್ತು ಸಂಬಂಧಗಳನ್ನು ವಿವರಿಸಿದರು. ಸಾಮೂಹಿಕ ಸಂಘಟನೆಗಳನ್ನು ವಿಶಾಲ ತಳಹದಿಯಲ್ಲಿ ಬೆಳೆಸುವ ಅವಶ್ಯವನ್ನು ಒತ್ತಿ ಹೇಳಿದರು, ಕಾಂ. ಪಿ. ಆರ್.

27ರಂದು ಸಂಜೆ 6-30ರ ತನಕ ವರದಿಯ ಮೇಲೆ ಚರ್ಚೆಯು ಮುಂದುವರಿದಿತ್ತು. 28ರಂದು ಬೆಳಗ್ಗೆ 9 ರಿಂದ ಮಧ್ಯಾಹ್ನ 2 ಗಂಟೆಯ ತನಕ ಅಧಿವೇಶನ ಮುಂದುವರೆಯಿತು. ಚರ್ಚೆಗೆ ಉತ್ತರ, ಸಂಘಟನಾ ಮತ್ತು ಇತರ ನಿರ್ಣಯಗಳ ಮಂಡನೆ ಮತ್ತು ಸ್ವೀಕಾರಗಳಿಗೆ ಕೊನೆಯ ದಿನದ ಅಧಿವೇಶನವನ್ನು ವಿನಿಯೋಗಿಸಲಾಗಿತ್ತು. 28ರಂದು ಬೆಳಗ್ಗೆ ಪಕ್ಷದ ರಾಜ್ಯದ ಹಿರಿಯ ಮುಂದಾಳು ಕಾಂ. ಎನ್. ಎಲ್. ಉಪಾಧ್ಯಾಯ ಅವರು ಕರ್ನಾಟಕ ರಾಜ್ಯದಲ್ಲಿ ಕಮ್ಯೂನಿಸ್ಟ್ ಚಳುವಳಿಯು ನಡೆದು ಬಂದ ಅನುಭವವನ್ನು ಮತ್ತು ಚರಿತ್ರೆಯನ್ನು ಸ್ಥೂಲವಾಗಿ ವಿವರಿಸಿದರು. ಹಿಂದಿನ ಶ್ರೀಮಂತ ಅನುಭವ ಮತ್ತು ಇಂದು ಪಕ್ಷಕ್ಕೆ ದೊರೆತಿರುವ ಉತ್ಸಾಹಿ ಹೊಸ ಸಂಗಾತಿಗಳ ಉತ್ಸಾಹಗಳನ್ನು ಒಂದುಸೇರಿಸಿ, ಮುನ್ನಡೆಯಲು ಕರೆ ಇತ್ತರು ಕಾಂ. ಎನ್. ಎಲ್.

ಚರ್ಚೆಯಲ್ಲಿ ಉತ್ಸಾಹದಿಂದ ಭಾಗವಹಿಸಿ, ಸೂಕ್ತ ಸಲಹೆಗಳನ್ನು ಕೊಟ್ಟದ್ದಕ್ಕೆ ಚರ್ಚೆಯಲ್ಲಿ ಭಾಗವಹಿಸಿದವರೆಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸಿದರು ಕಾಂ. ಎಂ. ಕೆ. ಭಟ್. ರಾಜ್ಯಸಮಿತಿಯ ಪರವಾಗಿ ಚರ್ಚೆಗೆ ಉತ್ತರವನ್ನೀಯುತ್ತಾ, ಚರ್ಚೆಯಲ್ಲಿದ್ದ ಲೋಪದೋಷಗಳನ್ನು ಎತ್ತಿತೋರಿಸಿದರು. ಪಕ್ಷದೊಳಗಿನ ನಿಷ್ಕ್ರಿಯತೆಯನ್ನು ಹೋಗಲಾಡಿಸಲು ಪಕ್ಷದ ಒಳಗೆ ಸಂಘಟನಾ ಚೌಕಟ್ಟಿನೊಳಗೆ ಹೋರಾಟ ನಡೆಸಬೇಕು. ನಮ್ಮನ್ನು ನಾವು ತಿದ್ದಿಕೊಳ್ಳಲು ಪ್ರಯತ್ನಿಸಬೇಕು. ಆದರೆ ಅದೇ ಸಂದರ್ಭದಲ್ಲಿ ಜನತೆಯೊಂದಿಗೆ ಸಂಪರ್ಕವನ್ನು ಹೆಚ್ಚಿಸಿಕೊಳ್ಳಬೇಕು. ಹೋರಾಟಗಳನ್ನು ಬೆಳೆಸಬೇಕು. ಸೈದ್ಧಾಂತಿಕವಾಗಿ ನಮ್ಮನ್ನು ನಾವು ಬೆಳೆಸಬೇಕು. ಮಾರ್ಕ್ಸ್‌ವಾದೀ ವಿರೋಧದ ಎಲ್ಲಾ ಸಿದ್ಧಾಂತ ಮತ್ತು ಮೌಲ್ಯಗಳನ್ನು ವಿರೋಧಿಸಬೇಕು. ಆತ್ಮವಿಶ್ವಾಸದಿಂದ, ಐಕ್ಯತೆಯಿಂದ ಮುನ್ನಡೆಯೋಣ ಎಂದು ಹಾರೈಸಿದರು.

ಸಂಘಟನಾ ಕರಡು ವರದಿ ಮತ್ತು ಚರ್ಚೆಯ ಆಧಾರದಲ್ಲಿ "ತುರ್ತಾಗಿ ಅನುಸರಿಸಬೇಕಾದ ಸಂಘಟನಾ ಕರ್ತವ್ಯಗಳ ಬಗ್ಗೆ" ಒಂದು ನಿರ್ಣಯವನ್ನು ಕಾಂ. ಸಿ. ನಂಜುಂಡಪ್ಪ ಮಂಡಿಸಿದರು. ಕಾಂ. ವಿ. ಜೆ. ಕೆ. ನಾಯರ್ ಅನುಮೋದಿಸಿದರು. ಪ್ರತಿನಿಧಿಗಳು ಇತ್ತ ಸಲಹೆಗಳನ್ನು ಸೇರಿಸಿಕೊಂಡು ವರದಿ ಮತ್ತು ಸಂಘಟನಾ ನಿರ್ಣಯಗಳನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು. (ಮುಂದಿನ ವಾರದ ಐಕ್ಯರಂಗದಲ್ಲಿ ಸಂಘಟನಾ ಯುಗಳನ್ನು ಪೂರ್ಣಗೊಳಿಸಲು ರಾಜ್ಯ ಸಮಿತಿಗೆ ಅಧಿಕಾರ ನೀಯುವುದರೊಂದಿಗೆ ವರದಿ ಮತ್ತು ಸಂಘಟನಾ ನಿರ್ಣ ನಿರ್ಣಯದ ಪೂರ್ಣಪಾಠ ಬರುವುದು) ರಾಜ್ಯದ ರಾಜಕೀಯ ಪರಿಸ್ಥಿತಿಯನ್ನು ವಿಶ್ಲೇಷಿಸಿ, ರಾಜ್ಯದಲ್ಲಿ ಸಿ.ಪಿ.ಐ.(ಎಂ), ಸಿ.ಪಿ.ಐ., ಕಾಂಗ್ರೆಸ್ (ಯು), ಲೋಕದಳ ಪಕ್ಷಗಳು ಒಂದುಸೇರಿ ಜಂಟೀ ಹೋರಾಟ ನಡೆಸಲು ಪ್ರಯತ್ನಿಸುವುದನ್ನು ಸ್ವಾಗತಿಸುವ ಮತ್ತು ಸಂಯುಕ್ತ ಚಳುವಳಿಗೆ ಕರೆ ಈಯುವ ರಾಜಕೀಯ ಪರಿಸ್ಥಿತಿ ಬಗ್ಗೆ ನಿರ್ಣಯವನ್ನು ಅಂಗೀಕರಿಸಲಾಯಿತು. ರೈತ ಚಳುವಳಿಗೆ ಬೆಂಬಲವಿತ್ತು, ರೈತಚಳುವಳಿಯನ್ನು ಬಲಪಡಿಸುವ; ಬರಗಾಲ ಪೀಡಿತ ಪ್ರದೇಶದಲ್ಲಿ ತುರ್ತುಪರಿಹಾರ ಕಾರ್ಯಕ್ಕಾಗಿ ಸರಕಾರವನ್ನು ಒತ್ತಾಯಿಸುವ; ರಾಷ್ಟ್ರೀಯ ಭದ್ರತಾ ಶಾಸನವನ್ನು ವಿರೋಧಿಸುವ; ಸಾರ್ವಜನಿಕ ಕ್ಷೇತ್ರದ ಕಾರ್ಮಿಕರ ಮುಷ್ಕರವನ್ನು ಬೆಂಬಲಿಸುವ; ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬಸ್ಸು ಪ್ರಯಾಣದರ ಏರಿಸುವುದನ್ನು ಖಂಡಿಸುವ; ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲ್ಲೂಕಿನಲ್ಲಿ ಹರಿಜನರ ಮನೆಗಳನ್ನು ನಾಶ ಮಾಡಿದ್ದನ್ನು ಖಂಡಿಸುವ; ಕುದುರೆಮುಖ ಎಚ್. ಎಸ್. ಸಿ ಎಲ್. ಕಾರ್ಮಿಕರ ಹೋರಾಟಕ್ಕೆ ಬೆಂಬಲವೀಯುವ ಮತ್ತು ಮೈಸೂರು ನಗರದಲ್ಲಿ ನಡೆಯುತ್ತಿರುವ ಸಿ.ಎಸ್.ಐ.ಆರ್. ಕಾರ್ಮಿಕರ ಮತ್ತು ಹೋಟೆಲು ಕಾರ್ಮಿಕರ ಹೋರಾಟಗಳನ್ನು ಬೆಂಬಲಿಸುವ ನಿರ್ಣಯಗಳನ್ನು ಅಂಗೀಕರಿಸಲಾಯ್ತು. ಮಧ್ಯಾಹ್ನದ ಮೇಲೆ ಬೃಹತ್ ಮೆರವಣಿಗೆ ಸಂಜೆ ಬಹಿರಂಗ ಸಭೆಗಳು ನಡೆದುವು.

●

ಎಸ್.ಎಫ್.ಐ. ರಾಜ್ಯ ಸಮ್ಮೇಳನ

1981ರ ಜನವರಿ 10 ರಿಂದ 12 ರವರೆಗೆ ಕೋಲಾರ ಜಿಲ್ಲೆಯ ಚಿಂತಾಮಣಿಯ ವಾಸವಿ ಧರ್ಮಶಾಲೆಯಲ್ಲಿ ಎಸ್.ಎಫ್.ಐ.ನ ಮೂರನೇ ರಾಜ್ಯ ಸಮ್ಮೇಳನವು ನಡೆಯುತ್ತದೆ.

ಜನವರಿ 9 ರಂದು ರಾತ್ರಿಯೊಳಗಾಗಿ ಎಲ್ಲ ಪ್ರತಿನಿಧಿಗಳು ಮತ್ತು ವೀಕ್ಷಕರು ಚಿಂತಾಮಣಿಯನ್ನು ತಲುಪಬೇಕು. ರಾತ್ರಿ 7 ಗಂಟೆಯವರೆಗೆ ಬೆಂಗಳೂರಿನಿಂದ ಚಿಂತಾಮಣಿಗೆ ಕೆ.ಎಸ್.ಆರ್.ಟಿ.ಸಿ. ಬಸ್‌ಗಳು ಸಿಗುತ್ತವೆ. ಬೆಂಗಳೂರು ರೈಲ್ವೆ ಸ್ಟೇಷನ್ ಎದುರಿನಲ್ಲಿಯೇ ಸಿಟಿ ಬಸ್ ನಿಲ್ದಾಣವು ಇರುತ್ತದೆ. ಜನವರಿ 9ರಂದು ಮಧ್ಯಾಹ್ನದಿಂದ ಜನವರಿ 10ರಂದು ಮಧ್ಯಾಹ್ನದವರೆಗೆ ಚಿಂತಾಮಣಿ ಬಸ್ ನಿಲ್ದಾಣದಲ್ಲಿ ಸ್ವಯಂ ಸೇವಕರು ಇರುತ್ತಾರೆ.

ಸಮ್ಮೇಳನಕ್ಕೆ ಬರುವಾಗ ಸದಸ್ಯತ್ವದ ಪುಸ್ತಕಗಳು, ಸದಸ್ಯತ್ವ ಶುಲ್ಕವನ್ನು (ಪ್ರತಿ ಸದಸ್ಯನಿಗೆ 15 ಪೈಸೆಯಂತೆ) ರಾಜ್ಯಸಮಿತಿಗೆ ಪಾವತಿ ಮಾಡಬೇಕು. ಇಲ್ಲವಾದಲ್ಲಿ ಅಂತಹ ಶಾಖೆಗಳ ಪ್ರತಿನಿಧಿಗಳಿಗೆ ಪ್ರವೇಶ ನೀಡಲಾಗುವುದಿಲ್ಲ. ರಾಜ್ಯಸಮಿತಿ ನಿಧಿ, ಮತ್ತಿತರ ಬಾಕಿ ಹಣವನ್ನು ಸಹ ತಪ್ಪದೆ ಪಾವತಿ ಮಾಡಬೇಕು. ತಮ್ಮ ತಮ್ಮ ಶಾಖೆಯ ಬ್ಯಾನರ್, ಬಾವುಟ ಇತ್ಯಾದಿಗಳನ್ನು ತರಬೇಕಾಗಿ ಕೋರಲಾಗಿದೆ.

○

ಚಂದಾದಾರರು ಮತ್ತು ಏಜನ್ಸಿದಾರರಿಗೆ

ಸೂಚನೆ

ಮಾನ್ಯರೇ,

ಐಕ್ಯರಂಗ ಇನ್ನೂ ಹೆಚ್ಚು ಪರಿಪೂರ್ಣವಾಗಬೇಕೆಂದು ನಾವು ಶ್ರಮಿಸುತ್ತಿದ್ದೇವೆ. ಇದಕ್ಕೆ ತಮ್ಮ ಸಹಕಾರವೂ ತುಂಬ ಅವಶ್ಯ. ಹಣಕಾಸಿನ ಸಮಸ್ಯೆಯಿಂದ ಪತ್ರಿಕೆ ತುಂಬ ಅನಾನುಕೂಲಗಳನ್ನು ಎದುರಿಸಬೇಕಾಗಿದೆ.

ಚಂದಾದಾರರ ಚಂದಾ ಅವಧಿ ಮುಗಿದಿರುವ ಬಗ್ಗೆ ಪ್ರತಿಯೊಬ್ಬರಿಗೂ ಪ್ರತ್ಯೇಕವಾಗಿ ಪತ್ರಮುಖೇನ ತಿಳಿಸಲಾಗಿದೆ. ಏಜನ್ಸಿದಾರರ ಬಾಕಿ ಹಣದ ಬಗ್ಗೆಯೂ ತಿಳಿಸಲಾಗಿದೆ. ಚಂದಾದಾರರು ತಮ್ಮ ಚಂದಾವನ್ನು ನವೀಕರಿಸಬೇಕಾಗಿ ಕೋರುತ್ತೇವೆ. ಏಜನ್ಸಿದಾರರು ತಕ್ಷಣ ಬಾಕಿ ಹಣ ಕಳಿಸಿಕೊಡಬೇಕು. ಇಲ್ಲದಿದ್ದರೆ 10-1-81ರಿಂದ ಪತ್ರಿಕೆ ಕಳಿಸುವುದನ್ನು ನಿಲ್ಲಿಸಲಾಗುವುದು. ಇದು ಅನಿವಾರ್ಯವಾಗಿದೆ.

ಏಜನ್ಸಿದಾರರ ಲೆಕ್ಕದಲ್ಲಿ ಏನಾದರೂ ಹೆಚ್ಚು-ಕಡಿಮೆ ಇದ್ದರೆ ತಕ್ಷಣ ಸಂಪರ್ಕಿಸಬೇಕು.

ತಕ್ಷಣ ಹಣಕಳಿಸಿಕೊಟ್ಟು ಪತ್ರಿಕೆಯು ತನ್ನ ಹೊಣೆಗಾರಿಕೆಯನ್ನು ಯಶಸ್ವಿಯಾಗಿ ನಿರ್ವಹಿಸುವುದಕ್ಕೆ ಸಹಕರಿಸಬೇಕು. ಹಣ 10-1-81 ರೊಳಗೆ ಬಾರದಿದ್ದಲ್ಲಿ ಪತ್ರಿಕೆ ಕಳಿಸುವುದನ್ನು ನಿಲ್ಲಿಸಲಾಗುವುದು. ಮತ್ತೆ ಮುಂಗಡ ಹಣ ಯಾರದು ಇಲ್ಲವೋ ಅವರು ಪತ್ರಿಕೆಯೊಂದಕ್ಕೆ 2ರೂ. ಮುಂಗಡ ಹಣವನ್ನು ಕಳಿಸಬೇಕು.

ಸಂಪಾದಕ-ಮಂಡಳಿ

ಸೂಚನೆ

7ನೇ ಪುಟದಲ್ಲಿ "ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕರ ಸಾರ್ವತ್ರಿಕ ಮುಷ್ಕರ" ಲೇಖನವನ್ನು ಎಂಟನೇ ಪುಟಕ್ಕೆ ಮುಂದುವರಿದಿದೆ ಎಂದು ಹಾಕಲಾಗಿದೆ. ಆದರೆ ಸ್ಥಳಾಭಾವದಿಂದ ಇದನ್ನು ಮುಂದಿನವಾರ ಪ್ರಕಟಿಸಲಾಗುವುದು.

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560003, and Published by him on behalf of the Communist Party of India (Marxist) Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT